ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ನವೆಂಬರ್ 2018 ಮಾಸ ಪತ್ರಿಕೆ

ಸಂಪುಟ/Volume : 41
ಸಂಚಿಕೆ/Issue : 2
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | November 2018 | Monthly

# ಏಕತಾ ಮೂರ್ತಿ
## ಸರ್ದಾರ್ ವಲ್ಲಭಭಾಯಿ ಪಟೇಲ್





ಶಿಕ್ಷಕ ಸಂಘದೊಂದಿಗೆ ಅನಂತಕುಮಾರರ ಒಡನಾಟ 3
4 ಪರೀಕ್ಷಾ ತಯಾರಿ ವಿದ್ಯಾರ್ಥಿಗಾಗಿಯೋ ಅಥವಾ ಶಿಕ್ಷಕರಿಗಾಗಿಯೋ?
ಸಾಮಾಜಿಕ ಜಾಲತಾಣಗಳ ಬಳಕೆಗೆ ಒಂದು ಮಿತಿ 5
7 ದಿವ್ಯಾಂಗರಿಗೆ ಅವಕಾಶ ನೀಡಿ, ಅನುಕಂಪ ಬೇಡ

# ಸಂಪಾದಕೀಯ

"ಕಲಿಕೆ" ಎಂಬುದು ಒಂದು ಜೀವಿಯು ಪಡೆದುಕೊಳ್ಳುವ ಎಲ್ಲಾ ಬಗೆಯ ತಿಳುವು, ನೈಪುಣ್ಯ ಅಥವಾ ವರ್ತನೆಯ ರೀತಿಯ ಸಂಪಾದನೆ.

ಕಲಿಕೆಯ ಬಗ್ಗೆ ಇರುವ ವ್ಯಾಖ್ಯಾನಗಳನ್ನು ನೋಡೋಣ.

ವ್ಯಕ್ತಿಯ ಅನುಭವದಿಂದಾಗಿ ಆ ವ್ಯಕ್ತಿಯ ವರ್ತನೆಯಲ್ಲಿ ಸಾಪೇಕ್ಷವಾಗಿ, ಸ್ಥಿರವಾಗಿ ಉಳಿಯುವ ಬದಲಾವಣೆಯೇ ಕಲಿಕೆ– ವುಡ್ಸವರ್ತ.

ಪ್ರಕ್ರಿಯೆಯಾಗಿ ಕಲಿಕೆಯನ್ನು ನಾವು ಪ್ರತ್ಯಕ್ಷವಾಗಿ ನೋಡಲು ಸಾಧ್ಯವಾಗುವುದಿಲ್ಲ. ಆದರೆ ಕಲಿಕೆಯಿಂದಾಗಿ ವ್ಯಕ್ತಿಯಲ್ಲಿ ಉಂಟಾಗುವ ವರ್ತನೆ ಬದಲಾವಣೆಗಳಿಂದ ಅಭಿವ್ಯಕ್ತವಾಗುವ ಜ್ಞಾನಾಂಶಗಳು, ಗ್ರಹಿಕೆಗಳು, ಪರಿಕಲ್ಪನೆಗಳ ವ್ಯಾಖ್ಯಾನ, ಕೌಶಲಗಳು, ಸಮಸ್ಯಾ ಪರಿಹಾರ ಮತ್ತು ಮನೋಭಾವಗಳ ಆಧಾರದ ಮೇಲೆ ಕಲಿಕೆಯ ಪ್ರಕ್ರಿಯೆಗಳನ್ನು ನೋಡಬಹುದು.

ಕಲಿಕೆ ಯಾವಾಗಲೂ ಪ್ರಗತಿಶೀಲವಾದದ್ದು.

ವಿದ್ಯಾರ್ಥಿಗಳಲ್ಲಿ ಕಲಿಕೆಯೆಂಬುದು ನಾವು ಗಳಿಸುತ್ತಿರುವ ಸಂಪಾದನೆಯೆಂದೆನಿಸಬೇಕೆ ಹೊರತು ಒತ್ತಾಯಪೂರ್ವಕವಾಗಿ ಹೇರುತ್ತಿರುವ ಉದ್ಯೋಗದಂತಾಗಬಾರದು. ಕಲಿಕೆ ಇಷ್ಟದಿಂದಾಗಬೇಕೆ ಹೊರತು ಕಷ್ಟದಿಂದಾಗಬಾರದು. ಶಿಕ್ಷಕರು ಮಾಡುತ್ತಿರುವ ಪಾಠಗಳನ್ನು ವಿದ್ಯಾರ್ಥಿಗಳು ಅವರ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವಂತಿರಬೇಕು. ಜೀವನಕ್ಕೂ – ಕಲಿಕೆಗೂ ಸಮನ್ವಯತೆಯನ್ನು ಕಾಪಾಡಿಕೊಂಡು ಹೋಗುವಂತಿರಬೇಕು. ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸಿಕೊಂಡು ಹೋಗುವಂತಿರಬೇಕು.

**ಕೃತಯುಗದಲ್ಲಿ ಗುರು ಶಿಷ್ಯಗೆ ಬಡಿದು ಬುದ್ಧಿಯ**
**ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ**
**ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯರಿಗೆ ಬೈದು ಬುದ್ಧಿಯ**
**ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ**
**ದ್ವಾಪರಯುಗದಲ್ಲಿ ಶ್ರೀ ಗುರುವು ಶಿಷ್ಯಂಗೆ ಝುಂಕಿಸಿ (ಗದರಿಸಿ) ಬುದ್ಧಿಯ**
**ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ**
**ಕಲಿಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ವಂದಿಸಿ ಬುದ್ಧಿಯ**
**ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ**
**ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ**
**ನಾ ಬೆರಗಾದೆನು.**

ಹೀಗೆ ಗುರು ಮತ್ತು ಶಿಷ್ಯಂದಿರ ಸಂಬಂಧವನ್ನು ಹೇಳುತ್ತಾ ಬೆರಗಾದವರು ಬೇರಾರು ಅಲ್ಲ, 12 ನೇ ಶತಮಾನದ ಪ್ರಸಿದ್ಧ ಚಿಂತಕ, ತತ್ವಜ್ಞಾನಿ, ಶಿವಶರಣ ಮತ್ತು ವಚನಕಾರರಾದ ಅಲ್ಲಮಪ್ರಭುಗಳು.

ಹೀಗೆ ಗುರು ಶಿಷ್ಯಂದಿರ ಕಾಲಕಾಲದ ಸಂಬಂಧವನ್ನು 12 ನೇ ಶತಮಾನದಲ್ಲಿಯೇ ಹೇಳಿರುವಾಗ ಕಾಲದ ಕಟ್ಟಳೆಯ ಕಲಿತನಕ್ಕೆ ಒಳಗಾಗಿ ಕಲಿಸಬೇಕಾದ ಗುರುಗಳು ವಂದಿಸುತ್ತಾ, ಅವರನ್ನು ಶಿಕ್ಷಿಸದೆ, ಬೈಯದೆ, ಗದರಿಸದೆ ಪಠ್ಯಕ್ರಮದಲ್ಲಿನ ಪಾಠಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಜ್ಞಾನಾರ್ಜನೆಯನ್ನು ಮಾಡಿಸುತ್ತಾ ಬೇರೆ ಯಾವುದೇ ನೈತಿಕ, ರಾಷ್ಟ್ರೀಯ ಹಾಗೂ ಇನ್ನಿತರ ಒಳ್ಳೆಯ ಮೌಲ್ಯಗಳಿಗೆ ಗಮನ ನೀಡಲು ಆಗದೇ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸುವಂತೆ ವಿದ್ಯಾರ್ಥಿಗಳನ್ನು ತಯಾರು ಮಾಡುವುದೇ ಶಿಕ್ಷಕರ ನೈಪುಣ್ಯತೆಯ ಪರೀಕ್ಷೆಗೆ ಸವಾಲು. ಶಿಕ್ಷಕರಿಗೆ ಮತ್ತು ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಡಿಸೆಂಬರ್‌ನಿಂದ ಮಾರ್ಚ ಎಂಬುದು ಅತ್ಯಂತ ಒತ್ತಡದ ಸಮಯವೆಂದರೆ ತಪ್ಪಾಗಲಾರದು. ಆದರೆ ಶಿಕ್ಷಕರೇ ಆಗಲಿ, ಪೋಷಕರೇ ಆಗಲಿ ತಮ್ಮ ಒತ್ತಡವನ್ನು ವಿದ್ಯಾರ್ಥಿಗಳ ಮೇಲೆ ಹೇರಬಾರದು. ಒಂದು ಕಡೆ ಶಾಲೆಯಲ್ಲಿ ಪ್ರತಿ ವಿಷಯದ ಶಿಕ್ಷಕರು ಸಹ ಒತ್ತಡವನ್ನು ಹೇರುತ್ತಾ ಅತಿಯಾದ ಗೃಹಪಾಠವನ್ನು ನೀಡುತ್ತಾರೆ ಮತ್ತು ಮನೆಯಲ್ಲಿ ಮಕ್ಕಳ ಭವಿಷ್ಯದ ಬಗ್ಗೆ ಅತಿಯಾದ ಮತ್ತು ತಮ್ಮ ಮನಸ್ಸಿಗೆ ತಕ್ಕಂತೆ ಆಶಾಗೋಪುರಗಳನ್ನು ಕಟ್ಟಿಕೊಂಡಿರುವ ಪೋಷಕರು ತಮಗೇ ಗೊತ್ತಿದ್ದಂತೆಯೋ ಅಥವಾ ಗೊತ್ತಿಲ್ಲದಂತೆಯೋ ಅತಿ ಒತ್ತಡವನ್ನು ಹೇರುತ್ತಾ ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಗಲಿಬಿಲಿಗೊಳಿಸುತ್ತಾರೆ. ಆದ್ದರಿಂದ ಶಾಲೆಗಳಲ್ಲಿ ಎಲ್ಲಾ ವಿಷಯ ಶಿಕ್ಷಕರು ಮೊದಲನೆಯದಾಗಿ ಸಭೆ ಸೇರಿ ಪ್ರತಿ ವಿಷಯದ ಗೃಹಪಾಠಗಳನ್ನು ನೀಡುವುದರಿಂದ ಹಿಡಿದು ಪರೀಕ್ಷೆಗೆ ಹೇಗೆ ತಯಾರಿ ನಡೆಸಬೇಕೆಂಬುದರ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಒಂದು ವೇಳಾಪಟ್ಟಿಯನ್ನು ತಯಾರಿಸಿ ಮಕ್ಕಳ ಕಲಿಕೆಗೆ ಪೂರಕವಾಗಿ ವರ್ತಿಸಬೇಕು. ತರಗತಿಯಲ್ಲಿರುವ ಮಕ್ಕಳನ್ನು ಸಮನಾಗಿ ಎಲ್ಲಾ ಶಿಕ್ಷಕರು ದತ್ತು ತೆಗೆದುಕೊಂಡು, ತಾವು ದತ್ತು ತೆಗೆದುಕೊಂಡಿರುವ ಮಕ್ಕಳ ಎಲ್ಲಾ ವಿಷಯಗಳ ತಯಾರಿಯ ಬಗ್ಗೆ ಗಮನ ಹರಿಸಬೇಕು. ಪ್ರತಿ ಶಿಕ್ಷಕರು ತಮ್ಮ ತಮ್ಮ ವಿಷಯಗಳಲ್ಲಿಯೂ ಪೂರ್ವ ತಯಾರಿ ವೇಳಾಪಟ್ಟಿಯನ್ನು ತಯಾರಿಸಿ ವಿದ್ಯಾರ್ಥಿಗಳ ಮೇಲೆ ಅತಿ ಒತ್ತಡವನ್ನು ಹೇರದೇ, ತಾವು ಒತ್ತಡಕ್ಕೆ ಒಳಗಾದವರಂತೆ ವರ್ತಿಸದೇ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತಯಾರಿ (ಮೇಲೆ ಕಲಿಕೆಯ ವ್ಯಾಖ್ಯಾನಗಳನ್ನು ಗಮನಿಸಿ) ಮಾಡಬೇಕು. ಪೋಷಕರ ಸಭೆ ನಡೆಸಿ ವಿದ್ಯಾರ್ಥಿಗಳ ವೇಳಾಪಟ್ಟಿಯ ಬಗ್ಗೆ ಪೋಷಕರಿಗೆ ತಿಳಿ ಹೇಳಿ, ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಹಾಗೂ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಬಗ್ಗೆ ಒತ್ತಡ ಹೇರದೇ ಕಾಳಜಿ ವಹಿಸಲು ತಿಳಿಸಬೇಕು. ಆಗಾಗ ಶಾಲೆಯ ಬಳಿ ಬಂದು ತಮ್ಮ ತಮ್ಮ ಮಕ್ಕಳ ಪ್ರಗತಿಯ ಬಗ್ಗೆ ತಿಳಿದುಕೊಂಡು ಹೋಗಲು ತಿಳಿಸಬೇಕು. ಶಿಕ್ಷಕ–ವಿದ್ಯಾರ್ಥಿ–ಪೋಷಕರು ತ್ರಿಕೋನದ ಮೂರು ಬಿಂದುಗಳಾಗಿ ವರ್ತಿಸಬೇಕು.

ವಿದ್ಯಾರ್ಥಿಗಳಿಗೆ ಅರ್ಥವಾಗದೇ ಇರುವ ಕಠಿಣ ವಿಷಯಗಳನ್ನು ಶಿಕ್ಷಕರು ಸಮಾಧಾನವಾಗಿ ಅರ್ಥ ಮಾಡಿಸಲು ಪ್ರಯತ್ನ ಮಾಡಬೇಕು. ಶಾಲೆಯ ಮುಖ್ಯೋಪಾಧ್ಯಯರು ಮತ್ತು ಶಿಕ್ಷಕರು ತಾವು ದತ್ತು ತೆಗೆದುಕೊಂಡಿರುವ ವಿದ್ಯಾರ್ಥಿಗಳ ಪೋಷಕರನ್ನು ಅವರ ಮನೆಯ ಹತ್ತಿರ ಭೇಟಿಯಾಗಿ ಅಥವಾ ದೂರವಾಣಿಯ ಮೂಲಕ ಮಾತನಾಡಿಸುತ್ತಾ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಬೇಕು. ಶಿಕ್ಷಕರು ರಸಪ್ರಶ್ನೆ ಕಾರ್ಯಕ್ರಮ, ವಿಶೇಷ ತರಗತಿಗಳು, ಚರ್ಚಾ ಸ್ಪರ್ಧೆ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಿಸುವಲ್ಲಿ ಪ್ರಯತ್ನ ಪಡಬಹುದು.

**ಪೋಷಕರ ಗಮನಕ್ಕೆ:** ನಮಗೆ ಸಾಧಿಸಲು ಆಗದೇ ಇರುವುದನ್ನು ನಮ್ಮ ಮಕ್ಕಳಿಂದ ಸಾಧಿಸೋಣ ಎಂಬ ಮನೋಭಾವವನ್ನು ಪೋಷಕರು ಬಿಡಬೇಕು. ಈ ಮನೋಭಾವನೆಯಿಂದ ಪೋಷಕರು ತಮಗೆ ಗೊತ್ತಿಲ್ಲದಂತಯೇ ಮಕ್ಕಳ ಮೇಲೆ ಒತ್ತಡ ಹೇರುತ್ತಾರೆ. ಇನ್ನೇನು ಶಾಲೆಯಲ್ಲಿ ಡಿಸೆಂಬರ್ ಹೊತ್ತಿಗೆ ಪಾಠಗಳನ್ನು ಪೂರೈಸಿದ ಶಿಕ್ಷಕರು ರಿವಿಷನ್ ಪ್ರಾರಂಭ ಮಾಡುತ್ತಾರೆ. ಆಗ ಪೋಷಕರು ವಿದ್ಯಾವಂತರಾಗಿದ್ದರೆ ವಿದ್ಯಾರ್ಥಿಗಳು ಓದಿದ ಪಾಠವನ್ನು ಎಷ್ಟರ ಮಟ್ಟಿಗೆ ಅರ್ಥೈಸಿಕೊಂಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು. ಪೋಷಕರು ಅವಿದ್ಯಾವಂತರಾಗಿದ್ದರೆ ಮಕ್ಕಳು ಓದುವಾಗ ಜೋರಾಗಿ ಓದುವಂತೆ ಹೇಳಿ ಪಕ್ಕದಲ್ಲಿ ಕುಳಿತರೂ ಸಾಕು. ಕೇವಲ ಓದಿನ ಬಗ್ಗೆಯೇ ಹೇಳದೇ ಸಮಯಕ್ಕೆ ತಕ್ಕಂತೆ ವಿಶ್ರಾಂತಿ ಪಡೆಯಲು ತಿಳಿಸಬೇಕು. ಅವರ ಆಹಾರದ ಬಗ್ಗೆಯೂ ಗಮನ ಹರಿಸಬೇಕು. ಜಂಕ್ ಆಹಾರಗಳನ್ನು ಆದಷ್ಟು ತಡೆದು ಪೌಷ್ಟಕಾಂಶಯುತ ಆಹಾರವನ್ನು ನೀಡಬೇಕು. ಮಕ್ಕಳ ಆರೋಗ್ಯದ ಬಗ್ಗೆಯೂ ಕಾಳಜಿ ಹೊಂದಿರಬೇಕು. ಸ್ವಲ್ಪ ಹೊತ್ತು ಆಟೋಟಗಳಲ್ಲಿಯೂ ಭಾಗವಹಿಸಲು ತಿಳಿಸಬೇಕು.

ಇಷ್ಟೆಲ್ಲಾ ವಿಷಯಗಳಿಗೆ ಗಮನಹರಿಸಿದರೆ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಕಲಿಕೆಯೆಂಬುದು ಹೊರೆಯಾಗಲಾರದು.

ಸಂಪಾದಕ

# ಶಿಕ್ಷಕ ಸಂಘದೊಂದಿಗೆ ಅನಂತಕುಮಾರರ ಒಡನಾಟ

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಅಂದು 2014ರ ಲೋಕಸಭಾ ಚುನಾವಣೆಯ ಸಮಯ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಮಾನ್ಯ ಅನಂತ ಕುಮಾರ್‌ರವರನ್ನು ಭೇಟಿ ಮಾಡಿ ಅವರಿಗೆ ಶುಭಕೋರಲೆಂದು ನಿರ್ಧರಿಸಿದರು. ಪದಾಧಿಕಾರಗಳ ಅಪೇಕ್ಷೆಯಂತೆ ಮಹಿಳಾ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀಮತಿ ಸೀತಾಲಕ್ಷ್ಮಿಯವರಿಗೆ ಅನಂತಕುಮಾರ್ ದಂಪತಿಯವರನ್ನು ಭೇಟಿಯಾಗುವ ಸಮಯವನ್ನು ನಿರ್ಧರಿಸುವಂತೆ ತಿಳಿಸಲಾಯಿತು. ಶ್ರೀಮತಿ ಸೀತಾಲಕ್ಷ್ಮಿಯವರು ಮೊದಲಿನಿಂದ ಆ ದಂಪತಿಗಳಿಗೆ ಹತ್ತಿರದವರಾಗಿದ್ದರು. ಪದಾಧಿಕಾರಿಗಳ ಅಪೇಕ್ಷೆಯಂತೆ ಚುನಾವಣೆ ಇನ್ನು 15 ದಿನಗಳು ಉಳಿದಿದ್ದಾಗ ಅವರ ಬಸವನ ಗುಡಿಯ ಮನೆಯಲ್ಲಿ ಬೆಳಗಿನ 7 ಗಂಟೆಗೆ ಭೇಟಿಯಾಗುವ ಸಮಯವನ್ನು ನಿರ್ಧರಿಸಲಾಯಿತು. ನಮ್ಮ ಕಾರ್ಯಕರ್ತರ ತಂಡ 6.45ಕ್ಕೆ ಅವರ ಮನೆಯನ್ನು ತಲುಪಿ ಅವರನ್ನು ಭೇಟಿಯಾಗುವ ಹಾಲ್‌ನಲ್ಲಿ ಕುಳಿತಿದ್ದರು. ಹಿಂದಿನ ದಿನ ತಡರಾತ್ರಿಯಲ್ಲಿ ಮಲಗಿದ್ದು ಬೆಳಗಿನ 7 ಗಂಟೆಗೆ ಮಹಡಿ ಮೆಟ್ಟಿಲು ಇಳಿಯುತ್ತಿದ್ದಂತೆ ನಮ್ಮನ್ನು ಕಂಡು "ದಯವಿಟ್ಟು 5 ನಿಮಿಷ ಸಮಯಕೊಡಿ, ದೇವರ ಮನೆಯಲ್ಲಿ ಪ್ರಾರ್ಥಿಸಿ ಬರುತ್ತೇನೆ" ಎಂದ ಅನಂತ ಕುಮಾರ್ 5 ನಿಮಿಷ ತಡವಾದದಕ್ಕೆ ಕ್ಷಮೆಯಾಚಿಸಿದರು. ಉಭಯ ಕುಶಲೋಪರಿಯ ನಂತರ ಶಿಕ್ಷಕ ಸಂಘದ ಚಟುವಟಿಕೆಗಳ ಬಗ್ಗೆ ವಿಚಾರಿಸಿ ಶಿಕ್ಷಣ ಕ್ಷೇತ್ರದಲ್ಲಿ ಭಾರತೀಯತೆಯನ್ನು ತರಲು ಎಲ್ಲರೂ ಕೂಡಿ ಶ್ರಮಿಸಬೇಕೆಂದು ಆಗ್ರಹಿಸಿ ಬಂದವರಿಗೆಲ್ಲ ಕಾಫಿ, ತಿಂಡಿ ಸತ್ಕಾರ ಮಾಡಿ ಮುಂದಿನ ಚುನಾವಣಾ ಪ್ರಚಾರಕ್ಕಾಗಿ ತೆರಳಿದರು. ನಾವು ಅವರೊಡನೆ ಕಳೆದ ಆ ಹತ್ತು ನಿಮಿಷಗಳಲ್ಲಿ ಶಿಕ್ಷಣ ಕ್ಷೇತ್ರದ ಬಗ್ಗೆ ಹಾಗೂ ಶಿಕ್ಷಕರ ಬಗ್ಗೆ ಅವರಲ್ಲಿದ್ದ ಅಪಾರ ಕಾಳಜಿ ನಮ್ಮೆಲ್ಲರ ಅನುಭವಕ್ಕೆ ಬಂದಿತು.



ಅನಂತಕುಮಾರ್ ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ದುಡಿಯುತ್ತಿದ್ದ ವಿದ್ಯಾರ್ಥಿ ಸಂಘಟನೆ ಎ.ಬಿ.ವಿ.ಪಿಯ ಸಕ್ರಿಯ ಕಾರ್ಯಕರ್ತರಾಗಿ ಅದರ ರಾಜ್ಯ ಮತ್ತು ರಾಷ್ಟ್ರೀಯ ಕಾರ್ಯದರ್ಶಿಗಳಾಗಿ ಹೊಣೆ ಹೊತ್ತವರು. ತಮ್ಮ ಹೋರಾಟಗಳ ಮೂಲಕ ಶಿಕ್ಷಣಕ್ಷೇತ್ರದಲ್ಲಿನ ಅನೇಕ ಬದಲಾವಣೆಗಳಿಗೆ ಕಾರಣ ಕರ್ತರಾದವರು.

ಅಷ್ಟೇ ಅಲ್ಲದೇ ಇಡೀ ಭಾರತ "ಒಂದೇ ಮನೆ ಒಂದೇ ಕುಟುಂಬ" ಎಂದು ಯುವ ಮನಸ್ಸುಗಳಿಗೆ ಅರಿವಾಗಲು ಈಶಾನ್ಯ ಭಾರತದ ವಿದ್ಯಾರ್ಥಿಗಳನ್ನು ದಕ್ಷಿಣಕ್ಕೆ ಕರೆತಂದು ಭಾರತದ ಭಾವೈಕ್ಯ ಮೂಡಿಸಲು ಅ.ಭಾ.ವಿ.ಪರಿಷತ್ತಿನ (ABVP) ಯೋಜನೆಯನ್ನು ಸಾಕಾರಗೊಳಿಸಲು ಶ್ರಮಿಸಿದವರು.

ಕಳೆದ ವರ್ಷ ನಮ್ಮ ಶಿಕ್ಷಕ ಸಂಘದ ಕೆಲವು ಕಾರ್ಯಕರ್ತರು ದೆಹಲಿಯ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಬೇಕಿತ್ತು. ಅವರಲ್ಲಿಗೆ ತೆರಳಿ ನಮ್ಮ ಕಾರ್ಯಕರ್ತರ ವಸತಿ ಹಾಗೂ ವಾಹನ ವ್ಯವಸ್ಥೆಗೆ ಕೇಳಿಕೊಂಡಾಗ ಸಹರ್ಷದಿಂದ ವ್ಯವಸ್ಥೆಯನ್ನು ಮಾಡಿದ್ದರು. ನಮ್ಮ ಕಾರ್ಯಕರ್ತರು ದೆಹಲಿಯಿಂದ ಹಿಂತಿರುಗಿ ಬಂದು ಅವರಿಗಾದ ವ್ಯವಸ್ಥೆಯ ಅನುಭವವನ್ನು ಮನಸಾರೆ ಮೆಚ್ಚಿಕೊಂಡು ನನಗೆ ತಿಳಿಸಿದಾಗ ಅನಂತಕುಮಾರ್‌ರವರ ಅತಿಥಿ ಸತ್ಕಾರದ ಬಗೆಗಿನ ಕಾಳಜಿ ಹಾಗೂ ಶಿಕ್ಷಕರ ಬಗೆಗಿನ ಅವರ ಅಭಿಮಾನದ ಅರಿವಾಯಿತು.

ನಮ್ಮ ಶಿಕ್ಷಕ ಸಂಘದ ಅನೇಕ ಕಾರ್ಯಕ್ರಮಗಳಿಗೆ ಅವರ "ಅದಮ್ಯ ಚೇತನ"ದ ನೆರವನ್ನು ಬಯಸಿದಾಗ ಎಂದಿಗೂ ಇಲ್ಲವೆನ್ನದೆ ಬಿಸಿ ಹಾಗೂ ರುಚಿಯಾದ ಊಟವನ್ನು ಕಳುಹಿಸಿದ್ದು ನಾವು ಮರೆಯುವುದಾದರೂ ಹೇಗೆ?

ವಿದ್ಯಾರ್ಥಿಗಳೆಂದರೆ ಅವರಿಗೆ ವಿಶೇಷ ಒಲವು. ಇಂದಿನ ವಿದ್ಯಾರ್ಥಿಗಳೇ ನಮ್ಮ ದೇಶವನ್ನು ಸದೃಢಗೊಳಿಸಬಲ್ಲ ಭಾವೀ ಜನಾಂಗ ಎಂಬ ನಿತಾಂತ ಶ್ರದ್ಧೆ ಅವರದ್ದು. ಅದಕ್ಕಾಗಿ ಪ್ರತಿವರ್ಷ ಶಿಕ್ಷಕ ಸಂಘವು ಯೋಜಿಸುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ 2 ಬಾರಿ ಆಗಮಿಸಿ ತಮ್ಮ ವಿದ್ಯಾರ್ಥಿ ಜೀವನದ ಅನುಭವಗಳನ್ನು ಹಂಚಿಕೊಂಡು, ವಿವೇಕಾನಂದರ ಉಕ್ತಿಗಳನ್ನು ಉದ್ಗರಿಸುತ್ತಾ ರಾಷ್ಟ್ರ ನಿಷ್ಠ ಪ್ರಜೆಗಳಾಗುವಂತೆ ಹುರಿದುಂಬಿಸಿದ್ದರು.

ಸ್ವಸಾಮರ್ಥ್ಯದಿಂದ ಅನಂತ ಕುಮಾರ್ ಬದುಕಿನ ಏಣಿಯನ್ನು ಮೇಲೇರಿದವರು. 6 ಬಾರಿ ಸತತವಾಗಿ ಒಂದೇ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾಗಿದ್ದು ಅವರ ಜನಾನುರಾಗಕ್ಕೆ ಸಾಕ್ಷಿ. ತಮ್ಮ 39ನೇ ವಯಸ್ಸಿಗೆ ಕೇಂದ್ರದಲ್ಲಿ ಅತ್ಯಂತ ಕಿರಿಯ ಮಂತ್ರಿಯಾಗಿದ್ದು ಅವರ ಆಡಳಿತ ಸಾಮರ್ಥ್ಯಕ್ಕೆ ಸಾಕ್ಷಿ.

ಜಾತಿ, ಮತ, ಪಕ್ಷ ಎಂಬ ಸಂಕುಚಿತತೆಯಿಂದ ಹೊರಬಂದು ಎಲ್ಲರೊಡನೆ ಬೆರೆತು ಅಜಾತಶತ್ರುವೆನಿಸಿಕೊಂಡಿದ್ದು ಅವರ ಹಿರಿತನ. ಇಂತಹ ಅನಂತ ಕುಮಾರ್ ನಮ್ಮೊಂದಿಗಿಲ್ಲ. 59 ಸಾಯುವ ವಯಸ್ಸಲ್ಲ. ಭಾರತವನ್ನು ವಿಶ್ವಮಾತೆಯಾಗಿ ಕಾಣುವ ಅವರ ಕನಸು ಅಪೂರ್ಣವಾಗಿದೆ. ಶಿಕ್ಷಕ ಪ್ರಿಯರಾಗಿದ್ದ ಅವರ ಕನಸನ್ನು ಪೂರ್ಣಗೊಳಿಸುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ. ಆ ಜವಾಬ್ದಾರಿಯನ್ನು ನಾವೆಲ್ಲ ಸ್ವೀಕರಿಸಬಹುದಲ್ಲವೇ?

●

# ಪರೀಕ್ಷಾ ತಯಾರಿ
# ವಿದ್ಯಾರ್ಥಿಗಾಗಿಯೋ ಅಥವಾ ಶಿಕ್ಷಕರಿಗಾಗಿಯೋ

**ಚಿದಾನಂದ ಆ. ಪಾಟೀಲ**
**ರಾಜ್ಯ ಪ್ರಧಾನಕಾರ್ಯದರ್ಶಿ**
**ಕ.ರಾ.ಮಾ.ಶಿ.ಸಂ.**



ನಾವೆಲ್ಲ ಸುಗ್ಗಿ ಹಾಡನ್ನು ಕೇಳಿದ್ದೇವೆ. ಸುಗ್ಗಿ ಕಾಲದಲ್ಲಿ ರೈತ ತನ್ನ ಒಂದು ವರ್ಷದ ಶ್ರಮ ಹೊಲದಲ್ಲಿ ಕಾಣುತ್ತಿರುತ್ತಾನೆ ಮತ್ತು ಮುಂದಿನ ವರ್ಷದ ಜೀವನವನ್ನು ಕಟ್ಟಿಕೊಳ್ಳುತ್ತಾನೆ. ಹಾಗೆ ಶಿಕ್ಷಕರಾದವರು ಮಾರ್ಚ್-ಏಪ್ರಿಲ್ ತಿಂಗಳುಗಳನ್ನು ಬಹಳ ಭರವಸೆಯ ಕಣ್ಣುಗಳಿಂದ ನೋಡುತ್ತಾರೆ. ಶಿಕ್ಷಕರಿಗೂ ಇದೊಂದು ಸುಗ್ಗಿಯ ಕಾಲ.

ಶಿಕ್ಷಕರ ಸುಗ್ಗಿಯ ಕಾಲಕ್ಕೆ ಮೂರು ತಿಂಗಳ ಮುಂಚೆ ಈ ಲೇಖನದಲ್ಲಿ ಶಿಕ್ಷಕನ ಮಾನಸಿಕ ತಯಾರಿಯನ್ನು ವಾಸ್ತವಿಕವಾಗಿ ನೋಡೋದಾದರೆ ಎಸ್.ಎಸ್.ಎಲ್.ಸಿ ಮತ್ತು ಪಿ ಯು ಸಿ ಎರಡನೇ ವರ್ಷವೇ ಬಹಳ ಮಹತ್ವ ಕೊಡುವ ಪರೀಕ್ಷೆಗಳಾಗಿ ಇತ್ತೀಚೆಗೆ ಪರಿಗಣಿಸಲ್ಪಟ್ಟಿವೆ. ಇದರಿಂದಾಗಿ ವಿದ್ಯಾರ್ಥಿಗಳಿಗಿಂತ ಶಿಕ್ಷಕರಿಗೆ ಒತ್ತಡ, ಭಾರ ಹೆಚ್ಚುತ್ತಿದೆ. ಶಿಕ್ಷಕರಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಕಾರ್ಯ ಮಾಡುತ್ತಿರುವ ಶಿಕ್ಷಕರು ವಿದ್ಯಾರ್ಥಿಗಳನ್ನು ಪರೀಕ್ಷಾ ತಯಾರಿ ಮಾಡುವುದು ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿನ ಸೌಲಭ್ಯಗಳ, ಅವಕಾಶಗಳ ವ್ಯತ್ಯಾಸದಿಂದಾಗಿ ವಿದ್ಯಾರ್ಥಿಗಳ ಮಧ್ಯದಲ್ಲಿಯ ಒತ್ತಡದಂತೆ ಶಿಕ್ಷಕರು ಒತ್ತಡ ಅನುಭವಿಸುತ್ತಿದ್ದಾರೆ.

ಇತ್ತೀಚಿನ ಹೊಸ ಪಠ್ಯಪುಸ್ತಕಗಳು ಕೇಂದ್ರೀಯ ಪಠ್ಯಕ್ರಮದ ಆಧಾರವಾಗಿ ರಚನೆಯಾಗಿರುವುದರಿಂದ ಮತ್ತು ಪಠ್ಯಕ್ರಮ ರಚನಾ ಸಮಿತಿಯು ಮಾರ್ಚ್ ಏಪ್ರಿಲ್‌ವರೆಗಿನ ಒಟ್ಟು ಅವಧಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ರಚಿಸಲಾಗಿದೆ. ಆದರೆ ರಾಜ್ಯದಲ್ಲಿ ಇಲಾಖಾ ಆದೇಶದಂತೆ ಎಸ್.ಎಸ್.ಎಲ್.ಸಿ ಪಠ್ಯಕ್ರಮವನ್ನು ಡಿಸೆಂಬರ್ ತಿಂಗಳಲ್ಲಿಯೇ ಮುಗಿಸಬೇಕು. ಇದರಿಂದಾಗಿ ಶಿಕ್ಷಕ ಮಾನಸಿಕ ಒತ್ತಡದಿಂದಾಗಿ ಶಿಕ್ಷಕತನವನ್ನೇ ಕಳೆದುಕೊಳ್ಳುತ್ತಿದ್ದಾನೆ. ಇದು ವಾಸ್ತವಿಕವಾದರೂ ನಾನು ಶಿಕ್ಷಕ ಎನ್ನುವ ಭಾವನೆಯ ಮುಂದೆ ಪಠ್ಯಕ್ರಮ ಡಿಸೆಂಬರ್ ತಿಂಗಳಲ್ಲಿಯೇ ಕರಗುತ್ತದೆ. ಜನವರಿ-ಫೆಬ್ರವರಿ ತಿಂಗಳಲ್ಲಿ ಪಠ್ಯದ ಪುನರ್ ಮನನದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುತ್ತಿದೆ. ಪರೀಕ್ಷಾ ಫಲಿತಾಂಶಕ್ಕಾಗಿ ಭರವಸೆಯ ಕಣ್ಣುಗಳಿಂದ ನೋಡುತ್ತೇವೆ. ಒತ್ತಡ ನಿವಾರಿಸಿಕೊಳ್ಳುವ ಶಕ್ತಿಯನ್ನು ನಮಗೆ ಅರಿವಿಲ್ಲದಂತೆ ಬೆಳೆಸಿಕೊಳ್ಳುತ್ತೇವೆ. ಒತ್ತಡ ನಿವಾರಿಸಿಕೊಳ್ಳುವುದಕ್ಕಾಗಿ ಶಿಕ್ಷಕರಾದ ನಾವುಗಳು ಧ್ಯಾನ, ವ್ಯಾಯಾಮ, ಮುಂಜಾನೆಯ ನಡಿಗೆ, ಸಮಾನ ಮನಸ್ಕರೊಂದಿಗೆ ಸ್ವಲ್ಪ ಹರಟೆ, ಪಠ್ಯಕ್ರಮವನ್ನು ನಾನು ಸುಲಭವಾಗಿ ಅರಗಿಸಿಕೊಳ್ಳಬಲ್ಲೆ ಎನ್ನುವ ಮನೋಭಾವ ಬೆಳೆಸಿಕೊಂಡಿದ್ದೆ ಆದರೆ ಮಕ್ಕಳ ಮೇಲೆ ಇನ್ನಷ್ಟು ಒಳ್ಳೆಯ ಪರಿಣಾಮವನ್ನು ಬೀರಬಹುದು ಮತ್ತು ಮಾನಸಿಕ ಒತ್ತಡದಿಂದಲೂ ಮುಕ್ತಿ ಪಡೆಯಬಹುದು.

ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಓದಬೇಕೆಂಬ ಭಾವನೆ ತರುವುದಕ್ಕಾಗಿಯೇ ಬಹಳಷ್ಟು ಪ್ರಯತ್ನಗಳನ್ನು ಮಾಡುವುದನ್ನು ಕಂಡಿದ್ದೇವೆ. ನಗರದ ಸರ್ಕಾರಿ ಶಾಲೆಗಳು ತಮ್ಮದೇ ಆದ ವೈಶಿಷ್ಟ್ಯಗಳನ್ನು ಹೊಂದಿರುತ್ತವೆ. ಇಲ್ಲಿ ವಿದ್ಯಾರ್ಥಿಗಳಿಗೆ ಪಾಲಕರ ಬಡತನ, ಹಿತಕರವಲ್ಲದ ಮನೆಯ ಪರಿಸರ, ಬಿಡುವಿನ ಅವಧಿಯ ದುಡಿಮೆಯ



ಜೀವನ, ಓದಿನಲ್ಲಿ ಇಲ್ಲದ ಆಸಕ್ತಿ ಹೀಗೆ ಪೂರಕವಲ್ಲದ ವಾತಾವರಣ ವಿದ್ಯಾರ್ಥಿಗಳಿಗೆ ಶೇಕಡಾ 98 ರಷ್ಟು ಇರುವಾಗ ಶಿಕ್ಷಕರು ಓದಿನತ್ತ ವಿದ್ಯಾರ್ಥಿಗಳ ಮಾನಸಿಕತೆ ತಯಾರು ಮಾಡುವುದೇ ಒಂದು ದೊಡ್ಡ ಸವಾಲು. ಅದಕ್ಕಾಗಿ ಶಿಕ್ಷಕರಾದ ನಾವುಗಳು ವಿದ್ಯಾರ್ಥಿಗಳ ಜೊತೆಯಲ್ಲಿ ವೈಯುಕ್ತಿಕವಾಗಿ ಮಾತನಾಡಬೇಕು. ಆಗ ಆ ವಿದ್ಯಾರ್ಥಿಯ ವಾಸ್ತವಿಕತೆ ಅರಿವು ನಮಗಾಗುತ್ತದೆ. ಕಲಿಕೆಗೆ ಪೂರಕವಾದ ಪ್ರಯತ್ನವನ್ನು ಶಿಕ್ಷಕ ಮಾಡಬಹುದಾಗಿದೆ.

ವಿದ್ಯಾರ್ಥಿಗಳ ಮನೆ ಭೇಟಿ ಮಾಡುವುದು ಶಿಕ್ಷಕನಾದವನಿಗೆ ಬಹುದೊಡ್ಡ ಪಾಠ ಕಲಿಸುತ್ತದೆ. ವಿದ್ಯಾರ್ಥಿಗಳ ಮನೆ ಭೇಟಿಗೆ ಶಿಕ್ಷಕರು ಗುಂಪಿನಲ್ಲಿ ಹೋಗಬೇಕು, ಸಾಧ್ಯವಾದರೆ ಶಾಲೆಯ ಎಸ್.ಡಿ.ಎಂ.ಸಿ ಅಥವಾ ಎಸ್.ಬಿ.ಸಿ ಸಾರಥ್ಯವನ್ನು ಕರೆದುಕೊಂಡು ಹೋದರೆ ಇನ್ನು ಹೆಚ್ಚು ಪರಿಣಾಮ ಬೀರುತ್ತದೆ. ಈ ಪ್ರಯತ್ನ ವರ್ಷದಲ್ಲಿ ಒಂದು ಬಾರಿ ಆದರೆ ಸಾಕು. ವಿದ್ಯಾರ್ಥಿಯ ಜೀವನವೇ ನಮಗೆ ತಿಳಿಯುತ್ತದೆ. ಇದರಿಂದ ಕಲಿಕೆಗೆ ಮತ್ತು ಪರೀಕ್ಷಾ ತಯಾರಿಗೆ ಸಹಾಯಕವಾಗುತ್ತದೆ.

ಪಾಲಕರ ಸಭೆಗಳೂ ಬರಿ ಸಭೆಗಳಾಗಬಾರದು. ವಿದ್ಯಾರ್ಥಿಗಳನ್ನು ಹೊರತುಪಡಿಸಿ ಪಾಲಕರನ್ನು ಮಾತ್ರ ಸಭೆಯಲ್ಲಿ ಇಟ್ಟುಕೊಂಡು ಚರ್ಚೆಯಾಗಬೇಕು. ಪಾಲಕರ ಸಭೆಗಳಲ್ಲಿ ಶಿಕ್ಷಕರು ತಾಳ್ಮೆಯಿಂದ ಮತ್ತು ಸಾಕಷ್ಟು ಸಮಯ ಇಟ್ಟುಕೊಂಡು ಪಾಲ್ಗೊಳ್ಳಬೇಕು ಮತ್ತು ಸಭೆಗೆ ಬಂದಿರುವ ಪಾಲಕರಿಗೆ ಈ ಶಿಕ್ಷಕರು ನಮ್ಮ ಮಕ್ಕಳನ್ನು ಬೆಳೆಸುವವರು

**ಪುಟ 9 ಕ್ಕೆ ➤**

ಭೂರಮೆ

# ಸಾಮಾಜಿಕ ಜಾಲತಾಣಗಳ ಬಳಕೆಗೆ ಒಂದು ಮಿತಿ

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

"ಬದಲಾವಣೆ ಪ್ರಗತಿಯ ಸಂಕೇತ" ಎನ್ನುತ್ತಾರೆ. ನಿಜ. ಆದರೆ, ಅದು ಸಕಾರಾತ್ಮಕವಾಗಿರಬೇಕು. ಅದಕ್ಕೆ ತಕ್ಕಂತೆ ನಮ್ಮ ಜೀವನಶೈಲಿಯೂ ಬದಲಾಗುತ್ತದೆ. ಅದು ಅವಶ್ಯಕ ಮತ್ತು ಅನಿವಾರ್ಯ ಸಹ. ವರ್ತಮಾನದ ವಿಚಾರಗಳನ್ನು, ವಾಸ್ತವತೆಯನ್ನು ಅರಿತು ಸಮಯದ ಜೊತೆ ಜೊತೆಗೆ ಸಾಗುತ್ತ ಸಮಾಜದೊಂದಿಗೆ ಬೆರೆಯಬೇಕಾಗುತ್ತದೆ. ಮನುಷ್ಯನ ಬೌದ್ಧಿಕ ಬೆಳವಣಿಗೆಯು ಸತತವಾದ ಅವನ ಆವಿಷ್ಕಾರ ಮನೋಭಾವದಿಂದಾಗಿ ಹಲವು ಹಂತಗಳನ್ನು ಏರುತ್ತಲೇ ಇದೆ. ಅಂತೆಯೇ ವಿಜ್ಞಾನಯುಗ, ಯಂತ್ರಯುಗ, ಕಂಪ್ಯೂಟರ್ ಯುಗ ಎಂಬ ಪ್ರಕಾರಗಳನ್ನು ಕಾಣುತ್ತಾ ಬಂದಿದ್ದೇವೆ. ಇವೆಲ್ಲದರ ಪರಿಣಾಮವಾಗಿ ಇಂದು ನಮ್ಮ ಜೀವನ ಸೌಲಭ್ಯಗಳೂ ಸಹ ಅತ್ಯಾಧುನಿಕವಾಗುತ್ತಿವೆ. ಅವುಗಳನ್ನೆಲ್ಲ ಬಳಸುವುದು ಬದುಕನ್ನು ಸುಲಲಿತವಾಗಿಯೂ, ಅನುಕೂಲಕರವಾಗಿಯೂ ನಡೆಸುತ್ತ ಉತ್ತಮವಾದ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯವನ್ನೂ ರಕ್ಷಿಸಿಕೊಳ್ಳುವುದಕ್ಕಾಗಿ ಎಂಬುದನ್ನು ಮಾತ್ರ ಮರೆಯುವಂತಿಲ್ಲ. ಇದು ಸಮಾಜದ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಶಿಕ್ಷಣ ಕ್ಷೇತ್ರವೂ ಇದಕ್ಕೆ ಹೊರತಲ್ಲ. ಇದೇ ಹಲವು ಸಮಸ್ಯೆಗಳನ್ನು ಈಗ ಎದುರಿಸುತ್ತಿದೆ.

'ಮಾತೆಯೇ ಮಗುವಿನ ಮೊದಲ ಗುರು' ಎಂಬುದು ಎಲ್ಲರಿಗೂ ತಿಳಿದದ್ದೇ. ಆಕೆ ಕೊಡುವ ಪ್ರಾರಂಭಿಕ ಶಿಕ್ಷಣವೇ ಮಗುವಿನ ಉತ್ತಮ ವ್ಯಕ್ತಿತ್ವಕ್ಕೆ ಭದ್ರಬುನಾದಿಯಾಗುತ್ತದೆ. ಚಿಕ್ಕಂದಿನಿಂದಲೇ ಬೆಳೆಸಿಕೊಳ್ಳಬೇಕಾದ ಆತ್ಮವಿಶ್ವಾಸ, ಆತ್ಮಗೌರವ, ಮಾನವೀಯತೆ, ಸಮಾಜಮುಖೀ ಚಿಂತನೆ ಮುಂತಾದ ಎಲ್ಲ ಗುಣಗಳು ಅಂತರ್ಗತವಾಗಲು ಆ ಮೊದಲ ಗುರುವಿನ ಮಾರ್ಗದರ್ಶನ, ಉತ್ತೇಜನ ಅತಿಮುಖ್ಯ. ಅದು ಸರಿಯಾದ ದಾರಿಯಲ್ಲಿ ನಡೆಯಬೇಕು.

ಈ ಎಲ್ಲ ಪೀಠಿಕೆಯೊಂದಿಗೆ ನಾವೀಗ ವರ್ತಮಾನದಲ್ಲಿ ಕಾಣುತ್ತಿರುವ ಕೆಲವು ಪ್ರಮುಖ ಸಮಸ್ಯೆಗಳನ್ನು ಕುರಿತು ವಿಚಾರ ಮಾಡಬೇಕಿದೆ. ವಿದ್ಯಾವಂತ ಮಹಿಳೆಯರ ಪ್ರಜ್ಞಾವಂತಿಕೆಯ ಕುರಿತು ಚಿಂತಿಸಬೇಕಾಗಿದೆ.

'ಕಲಿಕೆ ಎನ್ನುವುದು ಮಗುವಿಗೆ ಯಾವತ್ತೂ ಒಂದು ಹೊರೆ ಅಥವಾ ಶಿಕ್ಷೆ ಅನಿಸಬಾರದು. ಅದು 'ಪ್ರೀತಿ' ಎಂಬ ಎಳೆಯ ಮೇಲೇ ನಡೆಯುವ ಕ್ರಿಯೆಯಾಗಬೇಕು. ಆಗ ಅದಕ್ಕೆ ಶ್ರದ್ಧೆ ಎನ್ನುವುದು ತಾನಾಗಿಯೇ ಜೊತೆಗೂಡುತ್ತದೆ. ಸಂಗಡವೇ ಪ್ರಾಮಾಣಿಕ ಪ್ರಯತ್ನವೂ ತನ್ನ ಕೊಡುಗೆಯನ್ನು ನೀಡುತ್ತದೆ. ಇವೆಲ್ಲ ಸೇರಿದಾಗ ಉತ್ತಮ ಪ್ರತಿಫಲ ದೊರಕುವುದರಲ್ಲಿ ಸಂದೇಹವೆಲ್ಲಿ?

ಪ್ರಸ್ತುತ ಸಂಪರ್ಕ ಮಾಧ್ಯಮಗಳನ್ನು ಕುರಿತು ನಡೆಯುತ್ತಿರುವ ನಿರಂತರ ಸಂಶೋಧನೆಯಿಂದಾಗಿ ನಾವು ಬಳಸುತ್ತಿರುವ ಉಪಕರಣಗಳು ಬಹುಬೇಗ ಸುಧಾರಣೆಯೊಂದಿಗೆ ಬದಲಾಗುತ್ತಿವೆ. ವೈವಿಧ್ಯಮಯವಾದ ಸಾಧನೆಗಳು ಮಾರುಕಟ್ಟೆಗೆ ಬರುತ್ತಲೇ ಇವೆ. ಸಾಮಾಜಿಕ ಜಾಲತಾಣವೆಂಬ ತ್ರಿವಿಕ್ರಮನಂತೆ ಬೆಳೆದುನಿಂತಿರುವ ಮಾಧ್ಯಮ ಕ್ಷೇತ್ರವಂತೂ ತನ್ನ ಕಬಂಧಬಾಹುಗಳನ್ನು ಚಾಚುತ್ತ ಎಲ್ಲರನ್ನೂ ತನ್ನ ಗಡಿಯೊಳಗಡೆಗೇ ಸೇರಿಸಿಕೊಳ್ಳುತ್ತಿದೆ. ಫೇಸ್‌ಬುಕ್, ವಾಟ್ಸ್ಯಾಪ್, ಟ್ವಿಟರ್, ಇನ್ಸ್ಟಾಗ್ರಾಂಗಳಲ್ಲಿ ಮಾಹಿತಿಗಳು, ಛಾಯಾಚಿತ್ರಗಳು, ಸುದ್ದಿಗಳು ನಿರಂತರವಾಗಿ, ಸ್ವಚ್ಛಂದವಾಗಿ ಅಲೆದಾಡುವ ಕ್ಷೇತ್ರಗಳಾಗಿಬಿಟ್ಟಿವೆ. ಮುಖ್ಯ ಅಮುಖ್ಯ ಎಂಬ



ಪರಿವೆಯಿಲ್ಲದೆ ಅವಶ್ಯಕತೆಗಿಂತ ಹೆಚ್ಚಾಗಿ ವೈಯಕ್ತಿಕತೆಯ ಗಡಿಯನ್ನೂ ದಾಟುತ್ತಿವೆ. ಆಧುನಿಕತೆಯ ಭ್ರಮೆಯಿಂದ ಗೆಳೆಯರೊಂದಿಗೆ, ಬಂಧು ಬಾಂಧವರೊಂದಿಗೆ ಸಂವಹನ ನಡೆಸುವಾಗ ಹಂಚಿಕೊಳ್ಳುವ ಅನಿಸಿಕೆಗಳು ಬಾಲಿಶವಾಗಬಹುದೆಂಬ ಯೋಚನೆಯೂ ಇರುವುದಿಲ್ಲ. 'ಅನುಕರಣೆ'ಯನ್ನು ಕಲಿಕೆಯ ಒಂದು ಪ್ರಮುಖ ಮಾಧ್ಯಮವನ್ನಾಗಿಸಿಕೊಳ್ಳುವ ಮಗುವಿಗೆ ಇದೂ ಒಂದು ಪಾಠವಾಗುತ್ತದಲ್ಲವೇ? ವಿದ್ಯಾವಂತ ಮಹಿಳೆಯ ಪ್ರಜ್ಞಾವಂತಿಕೆ ಇಲ್ಲಿ ಶೂನ್ಯವಾಗಿಬಿಡುತ್ತದೇನೋ!

ಇದೇ ರೀತಿಯಲ್ಲಿ ನಾವಿಂದು ಕಾಣುತ್ತಿರುವ ಮತ್ತೊಂದು ವಿಪರೀತದ ಚಿತ್ರಣವೆಂದರೆ ಶಾಲೆಯಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸದ ಗತಿಯನ್ನು ತಾಯಂದಿರು ಗಮನಿಸುತ್ತಿರುವ ಅಥವಾ 'ಟ್ರ್ಯಾಕ್' ಇಡುತ್ತಿರುವ ವೈಖರಿ ಇಲ್ಲಿ ಇವರಿಗೆ ನೆರವಾಗುವುದು (ಹಾಗೆಂದು ಅವರ ಭ್ರಮೆ) ನಮ್ಮ ಸಾಮಾಜಿಕ ಜಾಲತಾಣಗಳು ಅವರ ಆತಂಕಭರಿತ ಅನಿಸಿಕೆಗಳ ವಿನಿಮಯ ಪ್ರಾರಂಭವಾಗುವುದು ಆ ಮಕ್ಕಳು ಒಂದನೇ ತರಗತಿಯಲ್ಲಿ ಅಭ್ಯಾಸ ಮಾಡುವಾಗಲೇ ಎಂದರೆ ಅತಿಶಯೋಕ್ತಿಯಲ್ಲ. ಮಕ್ಕಳ ಆತಂಕವನ್ನು ದೂರಮಾಡಿ, ಹಗುರ ಮನಸ್ಸಿನಿಂದ ಕಲಿಯುವುದರಲ್ಲಿ ಆಸಕ್ತಿ ಮೂಡಿಸಬೇಕಾದ ತಾಯಂದಿರು ಸ್ವತಃ ಸದಾ ಆತಂಕದಲ್ಲಿರುತ್ತ, ಮಕ್ಕಳಲ್ಲಿಯೂ ಅಧೈರ್ಯವನ್ನು, ಹಿಂಜರಿತವನ್ನು ಉಂಟುಮಾಡುತ್ತಾರೆ. ಶಾಲೆಯೆಂಬ ಹೊಸ ಆವರಣವನ್ನು ಹೊಕ್ಕ ಮಗು ಅಲ್ಲಿಯ ಪರಿಸರಕ್ಕೆ ಹೊಂದಿಕೊಂಡು ಕಲಿಕೆಯೆಂಬ ಹೊಸ ಕಾರ್ಯಕ್ಕೆ ಸಜ್ಜಾಗಬೇಕಾಗುತ್ತದೆ. ಆ ಸಮಯದಲ್ಲಿ ಅದರ ಮನಸ್ಸಿನಲ್ಲಿ ಯಾವುದೇ ಅಳುಕು, ಆತಂಕ ಇಲ್ಲದಂತೆ ಮಾಡುವುದು ತಾಯಿಯ ಕರ್ತವ್ಯವಾಗಿರುತ್ತದೆ. ತರಗತಿಯಲ್ಲಿ ಮಾಡಿದ ಪಾಠಗಳು, ಕೊಟ್ಟ ಮನೆಗೆಲಸ ಮುಂದೆ ಮಾಡಲಿರುವ ಪರೀಕ್ಷೆಗಳು ಅಥವಾ ಮಾಡಬೇಕಾಗುವ ಪ್ರಾಜೆಕ್ಟ್ ಕೆಲಸಗಳು, ಬರಲಿರುವ ಅಂಕಗಳು ಇತ್ಯಾದಿ ಎಲ್ಲದರ ಬಗೆಗೆ, ಅಂಕಗಳನ್ನು ಹೆಚ್ಚು ಹೆಚ್ಚಾಗಿ ತಮ್ಮ ಮಕ್ಕಳು

ಪುಟ 9 ಕ್ಕೆ ➢

# ಕ್ರಾಂತಿಕಾರಿ ಬರಹಗಾರ ಬಿಪಿನ್ ಚಂದ್ರ ಪಾಲ್



**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**



ಭಾರತದ ಸ್ವಾತಂತ್ರ್ಯ ಇತಿಹಾಸದಲ್ಲಿ ಅರ್ಪಿಸಿಕೊಂಡ ಅನೇಕ ಹಿರಿಯರಲ್ಲಿ ಪ್ರಸಿದ್ಧವಾಗಿ ಕೇಳಿ ಬರುವ ಹೆಸರುಗಳು ಮೂರು. ಲಾಲ್–ಬಾಲ್–ಪಾಲ್. ಅರ್ಥಾತ್ ಲಾಲಾ ಲಜಪತ್ ರಾಯ್, ಬಾಲ ಗಂಗಾಧರ ತಿಲಕ್, ಮತ್ತು ಬಿಪಿನ್ ಚಂದ್ರ ಪಾಲ್. ಈ ಮೂವರು ಹಿರಿಯರು ತಮ್ಮ ತೀಕ್ಷ್ಣತಮವಾದ ಹೋರಾಟಗಳಿಂದ, ಯುವಕರನ್ನು ಬಡಿದೆಬ್ಬಿಸಿದವರು. ತಮ್ಮ ಲೇಖನಿಯ ಹರಿತದಿಂದಲೇ ಬ್ರಿಟಿಷರ ಧ್ವಜವನ್ನು ಕತ್ತರಿಸಿದವರು.

ಬಿಪಿನ್ ಚಂದ್ರ ಪಾಲ್, ಹುಟ್ಟಿದ್ದು ಈಗಿನ ಬಾಂಗ್ಲಾದೇಶದ ಒಂದು ಹಳ್ಳಿಯಲ್ಲಿ. ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕೆಲವು ವರ್ಷಗಳ ಅಧ್ಯಯನದ ನಂತರ, ಅವರು ಅಧ್ಯಾಪಕ ವೃತ್ತಿಯನ್ನು ಕೈಗೆತ್ತಿಕೊಂಡರು.

ಕಲ್ಕತ್ತದಲ್ಲಿ ವಾಸವಾಗಿದ್ದ ಸಮಯದಲ್ಲೇ ಪಾಲರಿಗೆ, ಶಿವನಾಥ ಶಾಸ್ತ್ರೀ, ಎಸ್.ಎನ್.ಬ್ಯಾನರ್ಜಿ ಮುಂತಾದವರ ಸಂಪರ್ಕ ಉಂಟಾಗಿ ರಾಜಕೀಯ ಕ್ಷೇತ್ರದತ್ತ ಒಲವು ತಳೆದರು. ತಿಲಕರ ಮತ್ತು ಅರವಿಂದರ ರಾಷ್ಟ್ರೀಯ ವಿಚಾರಧಾರೆಗಳಿಂದ ಪ್ರೇರಿತರಾಗಿ ರಾಷ್ಟ್ರದ ಸ್ವಾತಂತ್ರ್ಯಕ್ಕೆ ತಮ್ಮನ್ನು ಸಮರ್ಪಿಸಲು ನಿರ್ಧರಿಸಿದರು.

ಉತ್ತಮ ಬರಹಗಾರರೂ, ಭಾಷಣಕಾರರೂ ಆಗಿದ್ದ ಪಾಲರು ತಮ್ಮ ವಾಕ್ಪ್ರವಾಹದಿಂದ ಸುಪ್ತವಾಗಿದ್ದ ಭಾರತೀಯರನ್ನು ಎಚ್ಚರಿಸಿದರು. ವಿಶೇಷವಾಗಿ ಲಾರ್ಡ್ ಕರ್ಜನ್ ಬಂಗಾಳದ ವಿಭಜನೆಗೆ ಮುಂದಾದಾಗ, ಮುಂಚೂಣಿಯಲ್ಲಿ ನಿಂತು ಹೋರಾಟ ನಡೆಸಿದವರು ಪಾಲರು. ಆಗ, ಅರವಿಂದರ ಜೊತೆ ಸೇರಿ 'ವಂದೇ ಮಾತರಂ' ಎಂಬ ಅದ್ಭುತವಾದ ಪತ್ರಿಕೆಯನ್ನು ಆರಂಭಿಸಿದರು. ಅದರ ಒಂದೊಂದು ಲೇಖನದಿಂದ ಸಿಡಿದೆದ್ದ ಕ್ರಾಂತಿಕಾರಿಗಳು ಹಲವಾರು. ಅಲ್ಲಿಂದ ಅವರ ತೀವ್ರಗಾಮಿತನ ದೇಶಾದ್ಯಂತ ಪರಿಚಿತವಾಯಿತು. 'ನ್ಯೂ ಇಂಡಿಯಾ' ಎಂಬ ಆಂಗ್ಲ ಪತ್ರಿಕೆಯನ್ನು, 'ಪರಿದರ್ಶಕ್' ಎಂಬ ಬಂಗಾಲ ಪತ್ರಿಕೆಯನ್ನು ಪ್ರಾರಂಭಿಸಿದರು. ಸ್ವಾತಂತ್ರ್ಯ, ಸಮಾಜ ಸುಧಾರಣೆಯ ಕುರಿತಾದ ಹಲವು ಪುಸ್ತಕಗಳ ರಚನೆಯನ್ನೂ ಮಾಡಿದರು. ಬ್ರಹ್ಮ ಸಮಾಜದ ಕಾರ್ಯಕರ್ತರಾಗಿದ್ದ ಪಾಲರು ಆ ಕಾಲದ ಸಮಾಜ ಸುಧಾರಣೆಯಲ್ಲೂ ಅಪಾರ ಕೆಲಸ ಮಾಡಿದರು.

ಇವೆಲ್ಲದರ ಜೊತೆಗೆ, ಅವರು ಸ್ವದೇಶೀ ಚಳುವಳಿಯನ್ನೂ ತೀವ್ರಗೊಳಿಸಿದರು. ಹೋದ ಕಡೆಯೆಲ್ಲ, ತಮ್ಮ ಭಾಷಣದಲ್ಲಿ ವಿದೇಶಿ ವಸ್ತುಗಳ ಪರಿತ್ಯಾಗಕ್ಕೆ ಒಟ್ಟು ಕೊಡುತ್ತಿದ್ದರು. ಅಣು–ಅಣುವಿನಿಂದ, ಗ್ರಾಮ–ಊರು–ರಾಜ್ಯಗಳಿಂದ ಕೂಡಿ ನಾವೆಲ್ಲರೂ ಒಂದು ದೇಶವಾಗಿ ಸ್ವಾತಂತ್ರ್ಯ ಸಾಧಿಸುವವರೆಗೂ ಚಳುವಳಿ ನಡೆಯುತ್ತಿರಬೇಕೆಂಬುದು ಅವರ ಭಾಷಣದ ಸಾರವಾಗಿರುತ್ತಿತ್ತು. ಈ ಮಧ್ಯದಲ್ಲಿ, ಬಾಂಬ್ ಪ್ರಕರಣದಲ್ಲಿ ಅನ್ಯಾಯವಾಗಿ ಅರವಿಂದರನ್ನು ಬಂಧಿಸಲಾಯಿತು. ಅರವಿಂದರ ವಿರುದ್ಧವಾಗಿ ಸಾಕ್ಷಿ ಹೇಳಲು ಪಾಲರಿಗೆ ಆಂಗ್ಲರು ಹೇಳಿದಾಗ, ಖಡಾಖಂಡಿತವಾಗಿ ತಿರಸ್ಕರಿಸಿದರು. ಸುಳ್ಳು ಸಾಕ್ಷಿ ಹೇಳಲು ನಿರಾಕರಿಸಿದ್ದಕ್ಕಾಗಿಯೇ ಅವರನ್ನೂ ಜೈಲಿಗೆ ತಳ್ಳಲಾಯಿತು.

'ಕ್ರಾಂತಿಕಾರಿ ಚಿಂತನೆಗಳ ಜನಕ' ಎಂದು ಸಮಕಾಲೀನ ವಿದ್ವಾಂಸರಿಂದ ಗುರುತಿಸಲ್ಪಟ್ಟ ಬಿಪಿನ್ ಚಂದ್ರ ಪಾಲರು ಹುಟ್ಟಿದ ದಿನ ನವೆಂಬರ್ 7. ಅವರ ಹೋರಾಟದ ಬದುಕು, ದೇಶಕ್ಕಾಗಿ ದುಡಿಯುವ ಸ್ವಭಾವ, ಸಮಾಜಕ್ಕಾಗಿ ಸ್ಪಂದಿಸುವ ಹೃದಯ, ಬರವಣಿಗೆಯ ಶಕ್ತಿ ನಮ್ಮಲ್ಲಿ ಪ್ರವಹಿಸಲಿ..

ವಂದೇ ಮಾತರಂ...

## ರಾಜ್ಯ ಶೈಕ್ಷಣಿಕ ಸಮ್ಮೇಳನ

**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 50 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸಂಘದ ಹಿರಿಯರು ದಿನಾಂಕ 18–12–2018 ರಂದು ಹುಬ್ಬಳ್ಳಿಯ ಕೆ.ಎಲ್.ಇ. ತಾಂತ್ರಿಕ ವಿಶ್ವವಿದ್ಯಾಲಯ (ಬಿ.ವಿ.ಬಿ. ಕಾಲೇಜ್) ಬಯೋಟೆಕ್ ಹಾಲ್, ವಿದ್ಯಾನಗರ, ಹುಬ್ಬಳ್ಳಿಯಲ್ಲಿ ರಾಜ್ಯ ಶೈಕ್ಷಣಿಕ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಿದ್ದು, ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಿಂದಲೂ ಹಿರಿಯ ಕಾರ್ಯಕರ್ತರು, ಮಹಿಳಾ ಕಾರ್ಯಕರ್ತೆಯರು ಹಾಗೂ ಕಾರ್ಯಕರ್ತರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶೈಕ್ಷಣಿಕ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.**

**ಪ್ರತಿ ಜಿಲ್ಲೆಯ ಅಧ್ಯಕ್ಷರು ತಮ್ಮ ತಮ್ಮ ಜಿಲ್ಲೆಗಳಿಂದ ಕನಿಷ್ಟ 20 ಜನ (15 ಪುರುಷರು + 5 ಮಹಿಳೆಯರು) ಕಾರ್ಯಕರ್ತರನ್ನು ಕರೆತರಬೇಕಾಗಿ ವಿನಂತಿಸಿಕೊಳ್ಳಲಾಗಿದೆ.**

**ಭಾಗವಹಿಸುವ ಶಿಕ್ಷಕರಿಗೆ ಅನ್ಯ ಕಾರ್ಯ ನಿಮಿತ್ತ (ಒಒಡಿ) ಸೌಲಭ್ಯವಿದ್ದು ಉಪಯೋಗಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.**

**ಏಳ್ಗೆ ಕರ್ನಾಟಕಂ, ಬಾಳ್ಗೆ ಕರ್ನಾಟಕಂ, ಆಳ್ಗೆ ಕರ್ನಾಟಕಂ ಜಗದೀಶ್ವರಿ – ಕಯ್ಯಾರ ಕಿಞ್ಞಣ್ಣ ರೈ**

# ದಿವ್ಯಾಂಗರಿಗೆ ಅವಕಾಶ ನೀಡಿ, ಅನುಕಂಪ ಬೇಡ

ಶ್ರೀಮತಿ ಸುನಿತಾ ಗಂಗಾಧರ್

ಡಿಸೆಂಬರ್ 3 ರಂದು 1992ರಲ್ಲಿ ವಿಶ್ವಸಂಸ್ಥೆಯು 'ವಿಕಲಚೇತನ ದಿನ'ವನ್ನಾಗಿ ಆರಂಭಿಸಿದ್ದು, ಆ ದಿನ ವಿಕಲಚೇತನ ಮಕ್ಕಳನ್ನು ಸೇರಿಸಿಕೊಂಡು ನಾನಾ ಕಾರ್ಯಕ್ರಮಗಳನ್ನು ಎಲ್ಲೆಡೆ ಹಮ್ಮಿಕೊಳ್ಳಲಾಗುತ್ತದೆ. ರಾಜ್ಯದಲ್ಲಿ ಸುಮಾರು 43 ವಿಕಲಚೇತನ ಶಾಲೆಗಳಲ್ಲಿ ಸುಮಾರು 2800 ಜನ ವಿದ್ಯಾರ್ಥಿಗಳಿದ್ದು ಈ ಪೈಕಿ ಸುಮಾರು 8 ಬುದ್ಧಿಮಾಂದ್ಯ ಶಾಲೆಗಳಿವೆ. ಉಳಿದವು ದೃಷ್ಟಿಹೀನತೆ, ಶ್ರವಣದೋಷ, ದೈಹಿಕ ವಿಕಲತೆ ಇತ್ಯಾದಿ ವಿಭಾಗಕ್ಕೆ ಸೇರಿವೆ.

ದಿವ್ಯಾಂಗ ಮಕ್ಕಳನ್ನು ಉಳಿದ ಮಕ್ಕಳಂತೆ ಸಮಾನತೆಯಿಂದ ಕಾಣಬೇಕು ಹಾಗೂ ಅವರ ಬಗ್ಗೆ ವಿಶೇಷ ಕಾಳಜಿ ವಹಿಸಿ ಪ್ರೋತ್ಸಾಹ ನೀಡಬೇಕು. ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕಾದರೆ ಪೋಷಕರು, ಶಿಕ್ಷಕರು, ಅಷ್ಟೇ ಅಲ್ಲದೆ ಸಮಾಜದ ಪ್ರತಿಯೊಬ್ಬರ ಸಕಾರಾತ್ಮಕ ಸ್ಪಂದನೆ ಕೂಡ ಮಹತ್ವದ ಪಾತ್ರವಹಿಸುತ್ತದೆ.

ದಿವ್ಯಾಂಗರು ಸಹ ಉಳಿದವರಂತೆ ಬಾಳಿ ಬದುಕಲು ಅವಕಾಶಗಳಿದ್ದು, ಅವರ ಪ್ರತಿಭೆಗೆ ನೀರೆರೆಯುವ ಮಹತ್ವದ ಕಾಯಕ ಶಿಕ್ಷಕನದ್ದು. ಇಲ್ಲಿ ಶಿಕ್ಷಕರಿಗೂ ಕೂಡ ವಿಶೇಷ ತರಬೇತಿ ಅವಶ್ಯಕತೆಯಿದ್ದು, ಸರ್ಕಾರದ ಹಲವು ಯೋಜನೆಗಳಲ್ಲಿ ಈ ಮಕ್ಕಳ ಆದ್ಯತೆ ಗುರುತಿಸಿ ಸೌಲಭ್ಯಗಳು ಅವರಿಗೆ ತಲುಪುವಂತೆ ಕಟ್ಟುನಿಟ್ಟಿನ ಕ್ರಮ ಕೂಡ ಅವಶ್ಯ. ಮಕ್ಕಳಲ್ಲಿರುವ ವಿಶಿಷ್ಟ ಶಕ್ತಿಯನ್ನು ಗುರುತಿಸುವ ಹೊಣೆಗಾರಿಕೆ ಪೋಷಕರಿಗೆ ಇರಬೇಕು. ಅವರಿಗೂ ಕೂಡ ಸೌಲಭ್ಯಗಳ ಮಾಹಿತಿ ತಿಳಿಯಪಡಿಸಬೇಕು. ಒಂದು ಸಧೃಡ ಸಮಾಜದ ಬೆನ್ನೆಲುಬು ಅಲ್ಲಿನ ನಾಗರೀಕರು. ಆ ನಾಗರೀಕತೆ ಬಲಗೊಳ್ಳುವುದೇ ಶಿಕ್ಷಣದ ಮೂಲಕ. ದೈಹಿಕ ನ್ಯೂನ್ಯತೆ ಮೀರಿ ಅವರ ಪ್ರತಿಭೆ ಹೊರಹೊಮ್ಮಲು ಸಾಮಾನ್ಯ ಮಕ್ಕಳೊಂದಿಗಿನ ಸಹಚರ್ಯ ಕೂಡ ಅಷ್ಟೇ ಮಹತ್ವದ್ದು, ಎಲ್ಲರಂತೆ ತಾನೂ ಅನ್ಯೋ ಭಾವ ಬಲಗೊಳ್ಳಬೇಕು. ಎಲ್ಲ ಸಾಮಾನ್ಯ ಬಾಲಕರೊಂದಿಗೆ ಸಹ ಶಿಕ್ಷಣದೊಂದಿಗೆ ಅವರುಗಳಿಗೆ ಕೊಂಚ ವಿಶೇಷ ಸೌಲಭ್ಯವನ್ನು ಒದಗಿಸಬೇಕು. ಉದಾ: ಶೌಚಾಲಯ, ಮೆಟ್ಟಿಲುಗಳ ಬದಲಿ ಪರ್ಯಾಯ ವ್ಯವಸ್ಥೆ, ವಾಹನ ಸೌಲಭ್ಯ, ಪಾಸ್, ವಿದ್ಯಾಭ್ಯಾಸಕ್ಕೆ ಅನುಕೂಲಿತ ಪಠ್ಯಸಾಮಗ್ರಿ. ಅವರ ಜೀವನವನ್ನು ಸುಧಾರಿಸಿ ಸಮಾಜ ಬಲಗೊಳ್ಳುವಂತೆ ಮಾಡುವಲ್ಲಿ ಸರ್ಕಾರ ಕೂಡ ಆಸಕ್ತಿ ವಹಿಸಿ ಕೆಲಸ ಮಾಡಬೇಕಾಗುತ್ತದೆ. ಎಷ್ಟೇ ಜಾಗೃತಿ ಮೂಡಿಸಿದರೂ ದಿವ್ಯಾಂಗರಿಗೆ ಸಿಗಬೇಕಾದ ಆದ್ಯತೆ, ಗೌರವ, ಪ್ರೀತಿಗೆ ಬದಲಾಗಿ ಆ ಜಾಗದಲ್ಲಿ ಕನಿಕರ ಭಾವವೊಂದೇ ಮೇಲ್ಪಟ್ಟದಲ್ಲಿರೋದು ವಿಷಾದನೀಯ.

ದಿವ್ಯಾಂಗ ಅಂತರ್ ಶಕ್ತಿಯ ಪರಿಚಯ ಜಗತ್ತಿಗೆ ತಿಳಿಯಬೇಕಾದರೆ ಮತ್ತು ಅವರು ಸದಾ ಎಲ್ಲರಿಗೂ ವಿಶೇಷವಾಗಿ ದಿವ್ಯಾಂಗರಿಗೆ ಭರವಸೆಯ ಕಿರಣಗಳಾಗಬೇಕಾದರೆ ವಿಶೇಷ ಸಾಧನೆ ಮಾಡಿರುವ ದಿವ್ಯಾಂಗರ ಚರಿತ್ರೆ ಕೂಡ ಪಠ್ಯದಲ್ಲಿ ದಾಖಲಾಗಿ ಸದಾ ನೆನಪಿನಲ್ಲಿ ಉಳಿಯುವಂತೆ ಕೆಲಸವಾಗಬೇಕು.

ಆರ್.ಟಿ.ಐ ಅಡಿ 18 ವರ್ಷದವರೆಗೆ ದಿವ್ಯಾಂಗ ಮಕ್ಕಳಿಗೆ ಕಡ್ಡಾಯ ಹಾಗೂ ಉಚಿತ ಶಿಕ್ಷಣ ಯೋಜನೆ ರೂಪಿಸಬೇಕು. ಬರೀ ಯೋಜನೆಗಳು ಘೋಷಣೆಯಾಗಿ ಸರ್ಕಾರಿ ಕಡತಗಳಲ್ಲಿ ಉಳಿದರೆ ಯಾವುದೇ ಪ್ರಯೋಜನವಿಲ್ಲ. ಹಲವಾರು ಸಂಘ ಸಂಸ್ಥೆಗಳು ಸರ್ಕಾರಕ್ಕೆ ಈ ಕುರಿತು ಬೇಡಿಕೆ, ಅಭಿವೃದ್ಧಿಗಾಗಿ ರೂಪುರೇಷೆ, ಸಲಹೆ, ಮನವಿ ಸಲ್ಲಿಸಬೇಕು. ಅದರಲ್ಲಿ ಸರ್ಕಾರಿ ಹುದ್ದೆಗಳಿಗೆ ಅಂಗವಿಕಲ ಮೀಸಲಾತಿ ಕ್ರೀಡಾಕೂಟದಲ್ಲಿ ಭಾಗವಹಿಸಲಿಚ್ಛಿಸುವ ಕ್ರೀಡಾಳುಗಳಿಗೆ ಆರ್ಥಿಕ ಸಹಾಯ, ಪ್ರೋತ್ಸಾಹ, ಅಂಗವಿಕಲ ಹುದ್ದೆಗಳ ಸಮರ್ಪಕ ಜಾರಿ ಕುರಿತಂತೆ ಹಲವಾರು ವಿಷಯಗಳ ಅನುಷ್ಠಾನ ಆಗಬೇಕು.

ಸಮಾಜದಲ್ಲಿನ ಜನರೆಲ್ಲರೂ ದಿವ್ಯಾಂಗರಿಗೆ ಕೇವಲ ಅನುಕಂಪ ತೋರಿಸದೇ, ಅವಕಾಶ ನೀಡಿದರೇ ಅವರು ಸಹ ಸ್ವಾಭಿಮಾನದಿಂದ ಬದುಕಲು ಸಾಧ್ಯ.

ವಿಕಲಾಂಗತೆ ಕೇವಲ ಶರೀರಕ್ಕಷ್ಟೇ. ಆದರೆ ಅಂತಹವರ ಪ್ರತಿ ನಮ್ಮ ಕೀಳು ಧೋರಣೆ ನಮ್ಮಗಳ ಮಾನಸಿಕ, ಬೌದ್ಧಿಕ ವಿಕಲಾಂಗತೆಯನ್ನು ತೋರುತ್ತದೆ. ಅವರಲ್ಲಿ ನಮಗಿಂತ ಹೆಚ್ಚಿನ ಪ್ರತಿಭೆ ಇದ್ದರೆ ಪ್ರೋತ್ಸಾಹಿಸೋಣ. ಜೊತೆಗೂಡಿ ನಡೆಯೋಣ. ಅಂತವರಲ್ಲಿ ಮಾನಸಿಕ ಸ್ಥೈರ್ಯ ಬೆಳೆಸೋಣ. ಶಿಕ್ಷಕ ಈ ದಿಶೆಯಲ್ಲಿ ಸಧೃಡ ಸಮಾಜದ ನಿರ್ಮಾಣಕಾರ ಕೂಡ ಆಗುತ್ತಾನೆ. ●

# ಬ್ರೈಲ್ ಲಿಪಿಗೆ ಪರ್ಯಾಯವಾಗಿ ಡಿವೈಸ್ ಕಂಡುಹಿಡಿದ ಭಾರತದ ಯುವ ವಿಜ್ಞಾನಿ

ಬ್ರೈಲ್ ಲಿಪಿ ದೃಷ್ಟಿಹೀನರ ಪಾಲಿನ ಬೆಳಕು. ಕಾಣದ ಅಕ್ಷರಗಳನ್ನು ಕೇವಲ ಸ್ಪರ್ಶ ಮಾತ್ರದಿಂದಲೇ ಓದಲು, ಅರ್ಥೈಸಲು ಅವರಿಗೆ ಇದು ಸಹಕಾರಿಯಾಗುತ್ತದೆ. ಕಳೆದ ಎರಡು ಶತಮಾನಗಳಿಂದ ವಿಶ್ವದಾದ್ಯಂತ ಅಂಧರನ್ನು ಇದು ಸಬಲೀಕರಣಗೊಳಿಸುತ್ತಲೇ ಬಂದಿದೆ. ಆದರೆ ಈಗ 23 ವರ್ಷದ ಭಾರತೀಯ ವಿಜ್ಞಾನಿ ರೂಪಂ ಮಿಶ್ರಾ, ತಮ್ಮ ಸ್ಟಾರ್ಟ್‌ಅಪ್ Manovue ಮೂಲಕ ಅಂಧರಿಗೆ ಜಗತ್ತನ್ನು ಅರ್ಥೈಸಲು ಪರ್ಯಾಯ ಮಾರ್ಗವನ್ನು ನೀಡಿದ್ದಾರೆ. ವಿಶನ್ ಇಂಟೆಲಿಜೆನ್ಸ್ ಮತ್ತು ಇಂಟರ್ನೆಟ್‌ನ್ನು ಒಂದುಗೂಡಿಸಿದ ಧರಿಸಬಹುದಾದ ಡಿವೈಸ್‌ನ್ನು ಇವರು ಅಭಿವೃದ್ಧಿಡಿಸಿದ್ದಾರೆ. ಬ್ರೈಲ್ ಬದಲು ಈ ಡಿವೈಸ್‌ನ್ನು ಬಳಸಿ ಅಕ್ಷರಗಳನ್ನು ಓದಬಹುದಾಗಿದೆ. ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ಆಧಾರಿತ ಡಿವೈಸ್ ಇದಾಗಿದೆ. 'Manovue ಪ್ರಮುಖವಾಗಿ ಧರಿಸಬಹುದಾದ ಡಿವೈಸ್ ಗ್ಲೌಸ್ ಮತ್ತು ಏಕೀಕೃತ ಮೊಬೈಲ್ ಆಪ್ ಆಗಿ ಕಾರ್ಯನಿರ್ವಹಿಸುತ್ತದೆ. ಇದನ್ನು ಬಳಸಿ ಅಂಧರು ಪ್ರಿಂಟ್ ಆದ ಅಕ್ಷರಗಳ ಮೇಲೆ ಕೈಬೆರಳನ್ನು ಅದರ ಮೇಲಿಟ್ಟು ಓದಬಹುದಾಗಿದೆ.'

ಇವರ Manovue ಸಂಸ್ಥೆ ವಿಶ್ವದ ಮೊದಲ ಇಂಟೆಲಿಜೆಂಟ್ ಪರ್ಸನಲ್ ಅಸಿಸ್ಟೆಂಟ್ ಸಿಸ್ಟಮ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತಮ್ಮ ಅದ್ಭುತ ಇನ್ನೋವೇಶನ್‌ಗಾಗಿ ಇವರು, 'ವರ್ಲ್ಡ್ ಹೆಲ್ತ್ ಸಮಿತ್ ಸ್ಟಾರ್ಟ್‌ಅಪ್ ಅವಾರ್ಡ್'ನ್ನು ಪಡೆದುಕೊಂಡಿದ್ದಾರೆ. ಯುಎನ್ ಯೂತ್ ಫೋರಂ ಆಂಡ್ ಇನ್ನೋವೇಶನ್ 2019ಗೂ ಇವರು ಶಾರ್ಟ್‌ಲಿಸ್ಟ್ ಆಗಿದ್ದಾರೆ.ನೀಡಿದ ಆಜ್ಞೆಯನ್ನು ಶಿರಸಾವಹಿಸಿ ನಡೆಸುವುದೇ ಶಿಷ್ಯನಾದವನ ಕರ್ತವ್ಯ ಎನ್ನುವುದನ್ನು ಅಂಗದದೇವ ತಮ್ಮ ನಡವಳಿಕೆಯ ಮೂಲಕವೇ ತೋರಿಸಿಕೊಟ್ಟರು.

ಕೃಪೆ : **news13.in**

# ಚಿತ್ರಕಲಾ ಶಿಕ್ಷಣ ಕುರಿತು ಒಂದು ದಿನದ ಚಿಂತನ-ಮಂಥನ

■ ವೃಷಭೇಂದ್ರ
ರಾಜ್ಯ ಕಾರ್ಯದರ್ಶಿ, ಕ.ರಾ.ಮಾ.ಶಿ.ಸಂ.

ಶಾಲಾ ಶಿಕ್ಷಣದಲ್ಲಿ ಚಿತ್ರಕಲೆ ವಿಷಯ ಅವಶ್ಯಕತೆ- ವಿಷಯವಾಗಿ ದಿನಾಂಕ 04.11.2018 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗು ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕ ಸಂಘಗಳ ಜಂಟಿ ಸಹಭಾಗಿತ್ವದಲ್ಲಿ ಒಂದು ದಿನದ ಕಾರ್ಯಕ್ರಮವಾಗಿ "ಚಿಂತನ-ಮಂಥನ ಕಾರ್ಯಕ್ರಮ" ನಡೆಸಲಾಯಿತು.

ಆರಂಭದಲ್ಲಿ ಚಿತ್ರಕಲಾ ಶಿಕ್ಷಕರು ರಚಿಸಿರುವ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಪ್ರದರ್ಶನವನ್ನು ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯ ಮಾರ್ಗದರ್ಶಕರಾದ ಶ್ರೀಯುತ ಜಿ.ಎಸ್. ಕೃಷ್ಣಮೂರ್ತಿಯವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಧಾನಪರಿಷತ್ ಹಾಲಿ ಸದಸ್ಯರು ಮತ್ತು ಮಾಜಿ ಸಭಾಪತಿಗಳು ಆದ ಶ್ರೀಯುತ ಪುಟ್ಟಣ್ಣನವರು ಚಿತ್ರಕಲಾ ಶಿಕ್ಷಕರ ಅವಶ್ಯಕತೆ ಬಗ್ಗೆ ಮಾತನಾಡಿ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಕಡ್ಡಾಯಗೊಳಿಸಲು ಎಲ್ಲಾ ಶಿಕ್ಷಕ ಪ್ರತಿನಿಧಿ ಶಾಸಕರೊಂದಿಗೆ ಪ್ರಯತ್ನಿಸುವುದಾಗಿ ಹೇಳಿದರು. ನಂತರ ಆರಂಭವಾದ ಉದ್ಘಾಟನಾ ಕಾರ್ಯಕ್ರಮದಲ್ಲಿ ABRSMನ ಪ್ರಧಾನಕಾರ್ಯದರ್ಶಿಯವರಾದ ಶ್ರೀ ಶಿವಾನಂದ ಸಿಂಧನಕೇರರವರು, ಮಾಧ್ಯಮಿಕ ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್‌ರವರು, ಕಾರ್ಯಾಧ್ಯಕ್ಷರಾದ ಶ್ರೀ ಅರುಣ್ ಶಹಾಪುರರವರು, ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಚಿದಾನಂದ ಪಾಟೀಲ್‌ರವರು, ಸಹ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಗಂಗಾಧರ್‌ರವರು ಹಾಗೂ ಚಿತ್ರಕಲಾ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಅವಟಿಯವರು, ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಅಪ್ಪಾಸಾಹೇಬ ಗಾಣಿಗೊರರವರು ಹಾಗೂ ಇನ್ನಿತರ ಪದಾಧಿಕಾರಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖಾ ಕಾರ್ಯದರ್ಶಿಯವರಾದ ಶ್ರೀಮತಿ ಶಾಲಿನಿ ರಜನೀಶ್‌ರವರು - "ಶಾಲಾ ಶಿಕ್ಷಣದಲ್ಲಿ ಚಿತ್ರಕಲೆ" ಕುರಿತು ತಯಾರಿಸಲಾದ ಸಾಕ್ಷ್ಯಚಿತ್ರವನ್ನು ಉದ್ಘಾಟಿಸಿ ಮಾತನಾಡಿ ಶಿಕ್ಷಣದಲ್ಲಿ ಚಿತ್ರಕಲೆಯ ಅವಶ್ಯಕತೆ ಇದ್ದೇ ಇರಬೇಕೆಂದು ಅನೇಕ ಉದಾಹರಣೆಗಳ ಮುಖಾಂತರ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ವಿಶ್ವಭಾಷೆಯಾದ ಚಿತ್ರಕಲೆಯು ಇತರೆ ವಿಷಯಗಳಿಗೆ ಪೂರಕವಾದ ಉಪಯುಕ್ತ ವಿಷಯವಾಗಿದೆ ಎಂದು ಹೇಳಿದರು. ಒಂದು ಚಿತ್ರವು ಸಾವಿರ ಪದಗಳಿಗೆ ಸಮವೆಂದು ತಮ್ಮ ಅನಿಸಿಕೆ ತಿಳಿಸಿದರು. ಒಂದು ಶಾಲೆಯ ಒಳ್ಳೆಯ ಗುರುತಿಸುವಿಕೆ ಒಬ್ಬ ಚಿತ್ರಕಲಾ ಶಿಕ್ಷಕನ ಇರುವಿಕೆಯಿಂದ ತಿಳಿಯುತ್ತದೆ ಎಂದು ತಿಳಿಸಿದರು. ಮಕ್ಕಳಲ್ಲಿ ಅಡಗಿರುವ ಸುಪ್ತವಾದ ಕೌಶಲ್ಯ ಹೊರಹಾಕಲು ಚಿತ್ರಕಲೆ ಸಹಕಾರಿಯಾಗಿದೆ ಎಂದು ಹೇಳಿ ತಮ್ಮಿಂದ ಎಲ್ಲಾ ಸಹಾಯ-ಸಹಕಾರ ಈ ಶಿಕ್ಷಣಕ್ಕೆ ಇದ್ದೇ ಇರುತ್ತದೆ ಎಂಬ ವಿಶ್ವಾಸದ ನುಡಿಗಳನ್ನಾಡಿದರು.

ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರು ಮತ್ತು ಮಾನ್ಯ ಶಾಸಕರು ಆದ ಶ್ರೀ ಅರುಣ್ ಶಹಪೂರ್‌ರವರು ಶಾಲಾ ಶಿಕ್ಷಣದಲ್ಲಿ ಚಿತ್ರಕಲೆ ಕಡ್ಡಾಯ ವಿಷಯವಾಗಬೇಕು. ಇದಕ್ಕಾಗಿ ಪಠ್ಯಪುಸ್ತಕ ರಚನೆಯಾಗಬೇಕು. ಚಿತ್ರಕಲಾ ಶಿಕ್ಷಕರ ನೇಮಕಾತಿ ಪ್ರಾಥಮಿಕ ಹಂತದಿಂದ ಕಡ್ಡಾಯವಾಗಬೇಕು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಚಿತ್ರಕಲಾ ಶಿಕ್ಷಣ ಮತ್ತು ಚಿತ್ರಕಲಾ ಶಿಕ್ಷಕರ ಸಮಸ್ಯೆ ಪರಿಹಾರಕ್ಕಾಗಿ ಒಂದು ತಜ್ಞರ ಸಮಿತಿ ರಚಿಸಲು ಎಲ್ಲಾ ಶಿಕ್ಷಕ ಕ್ಷೇತ್ರದ ಪ್ರತಿನಿಧಿ ಶಾಸಕರೊಂದಿಗೆ ಪ್ರಯತ್ನಿಸುವುದಾಗಿ ತಿಳಿಸಿದರು.

ABRSM ನ ಪ್ರಧಾನಕಾರ್ಯದರ್ಶಿಯವರಾದ ಶ್ರೀ ಶಿವಾನಂದ ಸಿಂಧನಕೇರರವರು ಚಿತ್ರಕಲಾ ಶಿಕ್ಷಣ ಮತ್ತು ಚಿತ್ರಕಲಾ ಶಿಕ್ಷಕರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮಾಧ್ಯಮಿಕ ಶಿಕ್ಷಕ ಸಂಘ ಸದಾ ಚಿತ್ರಕಲಾ ಶಿಕ್ಷಕರೊಂದಿಗೆ ಇರುತ್ತದೆ ಎಂದು ಭರವಸೆ ನೀಡಿದರು.

ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್‌ರವರು ಚಿತ್ರಕಲಾ ಶಿಕ್ಷಕರ ಎಲ್ಲಾ ಸಮಸ್ಯೆಗಳಿಗೂ ಸ್ಪಂದಿಸಿ ಇಲಾಖೆ ಹಾಗೂ ಸರ್ಕಾರದ ಗಮನ ಸೆಳೆಯಲು ನಮ್ಮ ಸಂಘಟನೆ ಸದಾ ನಿಮ್ಮೊಂದಿಗಿರುತ್ತದೆ ಎಂದು ಚಿತ್ರಕಲಾ ಶಿಕ್ಷಕರಿಗೆ ಭರವಸೆ ನೀಡಿದರು.

ಚಿತ್ರಕಲಾ ಶಿಕ್ಷಣ ವಿಷಯದ ಸಾರ್ವಜನಿಕ ಶಿಕ್ಷಣ ಇಲಾಖಾ ಆಯುಕ್ತಾಲಯದ ಸಹಾಯಕ ನಿರ್ದೇಶಕರಾದ ಶ್ರೀಯುತ ಕಂಠಿಯವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಚಿತ್ರಕಲಾ ಶಿಕ್ಷಣ ಅಭಿವೃದ್ಧಿಗೆ ಚಿತ್ರಕಲಾ ಶಿಕ್ಷಕರು ಹೆಚ್ಚಿನ ಶ್ರಮವಹಿಸಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸಬೇಕೆಂದು ಸಲಹೆ ನೀಡಿದರು. ಇಲಾಖಾ ಕಾರ್ಯಕ್ರಮಗಳನ್ನು ಸರಿಯಾಗಿ ನಿರ್ವಹಿಸಿ ಚಿತ್ರಕಲಾ ಶಿಕ್ಷಣ ಹಾಗೂ ಶಿಕ್ಷಕರ ಅನಿವಾರ್ಯತೆಯನ್ನು ಇಲಾಖೆ ಮತ್ತು ಸರ್ಕಾರದ ಗಮನಕ್ಕೆ ಬರುವಂತೆ ಮಾಡಬೇಕೆಂದು ಕಿವಿಮಾತು ಹೇಳಿದರು.

ರಾಜ್ಯ ಚಿತ್ರಕಲಾ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಅವಟಿಯವರು ಮಾತನಾಡಿ ಚಿತ್ರಕಲಾ ಶಿಕ್ಷಣ ಕಡ್ಡಾಯಗೊಳಿಸಲು ಹಾಗೂ ಚಿತ್ರಕಲಾ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲು ಮತ್ತು ಚಿತ್ರಕಲಾ ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ಇಲಾಖೆ ಮತ್ತು ಸರ್ಕಾರದೊಂದಿಗೆ ವ್ಯವಹರಿಸಲು ಮಾಧ್ಯಮಿಕ ಶಿಕ್ಷಕ ಸಂಘದ ಹಾಗೂ ಶಿಕ್ಷಕ ಕ್ಷೇತ್ರ ಶಾಸಕರ ಸಹಕಾರಕ್ಕಾಗಿ ಮನವಿ ಮಾಡಿಕೊಂಡರು. ಚಿತ್ರಕಲಾ ಶಿಕ್ಷಕರ ಸಮಸ್ಯಾ ಪಟ್ಟಿಯನ್ನು ಶ್ರೀ ಅರುಣ್‌ಶಹಪೂರ್‌ರವರಿಗೆ ಈ ಸಂದರ್ಭದಲ್ಲಿ ಸಲ್ಲಿಸಲಾಯಿತು.

ಕಲಾ ಶಿಕ್ಷಣ ಮತ್ತು ಕಲಾ ಶಿಕ್ಷಕರ ಸಮಗ್ರ ಅಭಿವೃದ್ಧಿಗೆ ಒಂದು ಆಯೋಗ ರಚಿಸಲು ಸರ್ಕಾರಕ್ಕೆ ಒತ್ತಡ ತರಬೇಕೆಂದು ಸಹ ಮನವಿ ಮಾಡಿಕೊಂಡರು.

ಒಟ್ಟು 22 ಜಿಲ್ಲೆಗಳಿಂದ 65 ಚಿತ್ರಕಲಾ ಶಿಕ್ಷಕ ಸಂಘದ ಪ್ರಮುಖ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಕಳೆ ತಂದುಕೊಟ್ಟರು. ಮುಕ್ತಾಯ ಕಾರ್ಯಕ್ರಮವಾಗಿ ಸಹ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಗಂಗಾಧರ್‌ರವರು ಸರ್ವರಿಗೂ ವಂದನೆಗಳನ್ನು ಸಲ್ಲಿಸಿದರು. ●

➢ ಪುಟ 4 ರಿಂದ..... ಪರೀಕ್ಷಾ ತಯಾರಿ...

ಎನ್ನುವ ಭಾವನೆ ಬರುವಂತಹ ವಾತಾವರಣ ನಿರ್ಮಿಸಬೇಕು. ಈ ಪಾಲಕರ ಸಭೆಗೆ ಬರಬೇಕಾದ ತೀರಾ ಅವಶ್ಯವಿರುವ ಪಾಲಕರೆ ಬರುವುದಿಲ್ಲ. ಈ ತರಹದ ಪಾಲಕರಿಗೆ ಉಳಿದ ಸಮಯದಲ್ಲಿ ಕರೆಸಿಕೊಳ್ಳಬೇಕು. ಅವರೊಂದಿಗೆ ಚರ್ಚಿಸುವುದು ಪರೀಕ್ಷೆಯ ದೃಷ್ಟಿಯಿಂದ ತೀರ ಅವಶ್ಯಕ.

ವಿಷಯದ ವಿಸ್ತಾರ ಮತ್ತು ಆಕರ್ಷಣೆಯ ಸಲುವಾಗಿ ಇಂದು ಸಾಮಾಜಿಕ ಜಾಲತಾಣಗಳಲ್ಲಿ ಸಿಗುವ ಕಲಿಕೆಗೆ ಪೂರಕ ಮಾಹಿತಿಗಳೂ, ಪಠ್ಯದ ಸಿ.ಡಿಗಳೂ, ವಿಷಯ ವೇದಿಕೆಗಳಲ್ಲಿ ಸಿದ್ಧವಾಗುವ ಪೂರಕ ಸಂಪನ್ಮೂಲ, ಪ್ರೊಜೆಕ್ಟರ್‌ಗಳ ಮೂಲಕ ಆಕರ್ಷಣೀಯವಾಗಿ ವಿದ್ಯಾರ್ಥಿಗಳಿಗೆ ಒದಗಿಸುವುದು ತೀರಾ ಅವಶ್ಯಕವಾಗಿದೆ. ಸ್ವಲ್ಪ ತಂತ್ರಜ್ಞಾನದ ಬಳಕೆಯ ಜ್ಞಾನವನ್ನು ನಾವು ರೂಢಿಸಿಕೊಳ್ಳಲೇಬೇಕು. ಇದರಿಂದ ದೂರವಿದ್ದರೂ ಮತ್ತು ಪೂರ್ವಾಗ್ರಹ ಪೀಡಿತ ಭಾವನೆಯಿಂದ ಹೊರಬಂದು ತಂತ್ರಜ್ಞಾನವನ್ನು ಬಳಸುವಲ್ಲಿ ನಾವುಗಳು ಸಿದ್ಧರಾದರೆ ತರಗತಿಯಲ್ಲಿಯ ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಗಬಹುದು.

ದಿನಗಳು ಮತ್ತು ವರ್ಷಗಳು ಕಳೆದಂತೆ ಕಲಿಕೆಯಲ್ಲಿ ಹೊಸ ಹೊಸ ಆಯಾಮಗಳು ಬರುತ್ತಿರುತ್ತವೆ. ವಿಷಯದ ಹರಿವು ಹೆಚ್ಚಾಗುತ್ತಲೇ ಹೋಗುತ್ತದೆ. ಶಿಕ್ಷಕರಾದ ನಾವುಗಳು ಹಳೆಯದಕ್ಕೆ ಜೋತುಬೀಳದೆ ನಮ್ಮ ಮನಸ್ಸನ್ನು ಮುಕ್ತವಾಗಿಟ್ಟುಕೊಂಡು ಹೊಸದನ್ನು ಒಪ್ಪಿಕೊಳ್ಳಬೇಕು ಮತ್ತು ಅಪ್‌ಡೇಟ್ ಆಗಬೇಕು. ಮನೋಶಾಸ್ತ್ರಜ್ಞರ ಸಲಹೆಯಂತೆ 5 ವರ್ಷದಲ್ಲಿ ವಿದ್ಯಾರ್ಥಿಗಳ ಮನೋಭಾವದಲ್ಲಿಯು ಬದಲಾವಣೆ ಯಾಗುತ್ತದೆ. ಹೀಗಾಗಿ ಬದಲಾದ ವಿದ್ಯಾರ್ಥಿಗಳ ಮನೋಭಾವಕ್ಕೆ ತಕ್ಕಂತೆ ನಾವುಗಳೂ ಸಹ ಸಿದ್ಧರಾಗಬೇಕು.

ಮಕ್ಕಳ ಪರೀಕ್ಷಾ ತಯಾರಿಗಾಗಿ ನಾವು ಕೈಗೊಳ್ಳುವ ಗುಂಪು ಅಧ್ಯಯನ, ರಸಪ್ರಶ್ನೆಗಳು, ಚರ್ಚೆಗಳು, ಬಿಡುವಿನ ವೇಳೆಯ ಸದುಪಯೋಗಕ್ಕಾಗಿ ಉಪಯೋಗಿಸುವ ತಂತ್ರಗಳು, ಶಿಕ್ಷಕರಾದ ನಾವುಗಳೂ ಎಷ್ಟೇ ಬುದ್ಧಿವಂತರಾಗಿದ್ದರೂ ನಮ್ಮ ಮಕ್ಕಳಿಗೆ ನಾವು "ಹಿತ್ತಲ ಮದ್ದು" ಇದ್ದಂತೆ. ಅದಕ್ಕಾಗಿ ಬೇರೆ ಶಾಲೆಗಳ ಶಿಕ್ಷಕರಿಂದ ವರ್ಷದಲ್ಲಿ ಕನಿಷ್ಠ ಎರಡು ಬಾರಿಯಾದರೂ ಒಂದೊಂದು ಗಂಟೆಯ ಅವಧಿಯನ್ನು ನೀಡಿ ಅವರ ಮೂಲಕ ವಿದ್ಯಾರ್ಥಿಗಳಿಗೆ ಪರೀಕ್ಷಾ ತಯಾರಿಯ ಬಗ್ಗೆ ತಿಳಿಸಿದರೆ ಇನ್ನಷ್ಟು ಪರಿಣಾಮಕಾರಿಯಾಗುವುದು ಎನ್ನವುದನ್ನು ಕಂಡುಕೊಂಡು ಪ್ರಯತ್ನಿಸುವ ಶಿಕ್ಷಕರು ವಿದ್ಯಾರ್ಥಿಗಳಿಗೆ ಇನ್ನಷ್ಟು ಉತ್ಸಾಹ ನೀಡುವಲ್ಲಿ ಸಹಾಯಕವಾಗುತ್ತಾರೆ.

ಅನೇಕ ಶಾಲೆಗಳಲ್ಲಿ ರಾತ್ರಿ ತರಗತಿಗಳು, ಬೆಳಿಗ್ಗೆ ಬೇಗ ವಿದಾರ್ಥಿಗಳನ್ನು ಎಬ್ಬಿಸುವುದಕ್ಕಾಗಿ ವಿವಿಧ ರೀತಿಯಲ್ಲಿ ಅನುಸರಿಸುವ ಕ್ರಮಗಳು, ಮನೋಶಾಸ್ತ್ರಜ್ಞರನ್ನು ಮತ್ತು ಸಾಧಕರನ್ನು ಕರೆತಂದು ನಡೆಸುವ ಚರ್ಚೆಗಳು ಇವೆಲ್ಲವು ವಿದ್ಯಾರ್ಥಿಗಳಿಗಾಗಿ ಎಂದು ಮೇಲುನೋಟಕ್ಕೆ ಕಂಡರು ಶಿಕ್ಷಕರಿಗೆ ಬಹಳಷ್ಟು ಉಪಯೋಗಕಾರಿಯಾಗಿವೆ.

ಪರೀಕ್ಷಾ ತಯಾರಿ ವಿದ್ಯಾರ್ಥಿಗಳಿಗಾಗಿಯೋ ಅಥವಾ ಶಿಕ್ಷಕರಿಗಾಗಿಯೋ ಎಂದು ವಿಶ್ಲೇಷಿಸುತ್ತಾ ಹೋದಾಗ ಕೊನೆಗೆ ಅರ್ಥವಾಗುವುದು ವಿದ್ಯಾರ್ಥಿಗಳಿಂದ ಶಿಕ್ಷಕ. ವಿದ್ಯಾರ್ಥಿಗಳಿಗಾಗಿ ಮಾಡುವ ಪ್ರಯತ್ನ ಶಿಕ್ಷಕ ಶಿಕ್ಷಕನೆನಿಸಿಕೊಳ್ಳಲು ಸಾಧ್ಯವಾಗುತ್ತದೆ ಅಲ್ಲವೇ ?

●

➢ ಪುಟ 5 ರಿಂದ..... ಸಾಮಾಜಿಕ ಜಾಲತಾಣ...

ಪಡೆಯುವ ದಾರಿಯ ಬಗೆಗೆ ಚರ್ಚೆ, ಅಂಕ ಕಡಿಮೆಯಾದರೆ ಮುಂದೆ ಭವಿಷ್ಯವೇ ಇಲ್ಲವೆಂಬ ಆತಂಕವನ್ನು ಹೊತ್ತು ಅನಿಸಿಕೆಗಳು ಎಲ್ಲವೂ ಈ ವಾಟ್ಸ್ಯಾಪ್‌ನ ಮೂಲಕ ವಿನಿಮಯವಾಗುತ್ತಿರುತ್ತವೆ, ಆಗುತ್ತಲೇ ಇರುತ್ತವೆ.

ಇಷ್ಟೇ ಅಲ್ಲ. ಮಕ್ಕಳು ಓದಬೇಕಿರುವ ಪಠ್ಯದ ಗಾತ್ರದ ಕುರಿತಾಗಲೀ, ಓದುವ ಪ್ರಮಾಣದ ಬಗೆಗೆ ಅಥವಾ ಕ್ರಮದ ಬಗೆಗೆ ಅಸಂತೃಪ್ತಿಯನ್ನೋ, ಆತಂಕವನ್ನೋ ವ್ಯಕ್ತಪಡಿಸುವುದಾಗಲೀ ನಿರಂತರವಾಗಿ ನಡೆದೇ ಇರುತ್ತದೆ. ಕಳವಳದ ಸಂಭಾಷಣೆಗಳೂ ನಡೆಯುತ್ತಲೇ ಇರುತ್ತವೆ. ಮಕ್ಕಳ ಮೇಲೆ ಅಂಕಗಳಿಸಬೇಕೆಂಬ, ಪಠ್ಯವಿಷಯದಲ್ಲಿ ಪೂರ್ಣ ಜ್ಞಾನ ಹೊಂದಿರ ಬೇಕೆಂಬ ಅಂಶಕ್ಕೆ ಸಂಬಂಧಿಸಿದಂತೆ ಒತ್ತಡ ಹೇರುವುದಂತೂ ಇದ್ದೇ ಇರುತ್ತದೆ. ಹಲವು ಮೂಲಗಳಿಂದ ಪಡೆಯುವ ಪ್ರಶ್ನೆ ಪತ್ರಿಕೆಗಳ ಪರಸ್ಪರ ವಿನಿಮಯ, ಹತ್ತಾರು ಕಡೆಗಳಲ್ಲಿ ಸಂಘ ಸಂಸ್ಥೆಗಳು ನಡೆಸುವ ಬಗೆಬಗೆಯ ಸ್ಪರ್ಧೆಗಳ ವಿವರ ಎಲ್ಲವೂ ಹರಿದಾಡುತ್ತಲೇ ಇರುತ್ತವೆ. ಎಲ್ಲದರಲ್ಲಿಯೂ ತಮ್ಮ ಮಕ್ಕಳು ಪಾಲ್ಗೊಳ್ಳಬೇಕು, ಬಹುಮಾನಿತ ರಾಗಬೇಕು ಎಂಬ ಅಪೇಕ್ಷೆಯನ್ನು ಹೊತ್ತ ಒತ್ತಾಯದ ಬಾಣ ನಾಟುವುದು ಮಕ್ಕಳ ಮೇಲೆ. ಇಂದಿನ ಮಕ್ಕಳಲ್ಲಿ ಗ್ರಹಣ ಸಾಮರ್ಥ್ಯ ತುಂಬ ಹೆಚ್ಚಾಗಿದೆ, ನಿಜ. ಆದರೆ ಹಾಗೆಂದು ಮಿತಿಮೀರಿದ ಒತ್ತಡವನ್ನು ಹೇರುವುದು ಸಾಧುವಲ್ಲ. ಶಾಲೆಯ ಬಾಗಿಲಲ್ಲಿ ಪ್ರಾರಂಭವಾಗುವ ಕಳವಳದ ಸಂಭಾಷಣೆಗಳು ಮುಂದುವರಿದ ಭಾಗವಾಗಿ ಮನೆಗೆ ಬಂದು ಮಗುವಿನ ಜೊತೆ ನಡೆಯುತ್ತದೆ. ಸಹಪಾಠಿಗಿಂತ ಕಲಿಕೆಯ ವೇಗ ನಿಧಾನವಾಗಿದೆಯಲ್ಲವೇ? ಸ್ಪರ್ಧೆಗಳಲ್ಲಿ ಭಾಗವಹಿಸಿದವರೊಂದಿಗೆ ಸೇರಲಿಲ್ಲವೇಕೆ? ಇತ್ಯಾದಿ ಪ್ರಶ್ನೆಗಳು ಉದುರುತ್ತವೆ.

ಇವೆಲ್ಲ ಮಗುವಿನಲ್ಲಿ ಖಿನ್ನತೆಯನ್ನು ಮೂಡಿಸಬಹುದಲ್ಲವೇ? ಕಲಿಯುವ ಮನಸ್ಸು ನಿರಾತಂಕವಾಗಿರಬೇಕೆಂಬುದಾಗಲೀ, ಅದರಲ್ಲಿ ಆತ್ಮವಿಶ್ವಾಸ ತುಂಬಬೇಕೆಂಬ ಅಂಶವಾಗಲೀ ಅವರ ಅರಿವಿಗೇ ಬಂದಿರುವುದಿಲ್ಲ. ವಿದ್ಯಾವಂತ ತಾಯಂದಿರಲ್ಲಿ ಮಾತ್ರ ಈ ಎಲ್ಲ ಸಾಮಾನ್ಯ ಜ್ಞಾನದ ಕೊರತೆಯನ್ನು ಕಾಣುತ್ತಿಲ್ಲ. ಅನೇಕ ಶಿಕ್ಷಕಿಯರಲ್ಲೂ ಆ ಸ್ವಭಾವವನ್ನು ಕಾಣುತ್ತಿದ್ದೇವೆ. ಸಹೋದ್ಯೋಗಿಗಳ ಅಥವಾ ಬಂಧುಗಳು, ಪರಿಚಿತರ ಮಕ್ಕಳಿಗಿಂತ ತಮ್ಮ ಮಕ್ಕಳ ಅಂಕ ಕಡಿಮೆಯಾಗಿಬಿಟ್ಟರೆ ತಲೆಎತ್ತಿ ನಿಲ್ಲುವುದು ಹೇಗೆಂಬ ಆತಂಕವನ್ನು ತುಂಬಿಕೊಂಡಿರುತ್ತಾರೆ.

ಮಗು ಪಡೆಯಬೇಕಾದುದು ಸುಸಂಸ್ಕೃತ ವ್ಯಕ್ತಿತ್ವವನ್ನು ಎಂಬುದನ್ನು ಬದಿಗೆ ಇಟ್ಟು ಅಂಕಾಧಾರಿತ ಶಿಕ್ಷಣಕ್ಕೇ ಪ್ರಾಶಸ್ತ್ಯ ನೀಡುತ್ತಾರೆ. ವಿಜ್ಞಾನದ ಕೊಡುಗೆಗಳು ನಮ್ಮ ಜೀವನವನ್ನು ಅಭಿವೃದ್ಧಿಯ ಪಥದಲ್ಲಿ ಕರೆದೊಯ್ಯುತ್ತಿರುವುದು ನಿಜ. ಶಿಕ್ಷಣ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿರಬೇಕೆಂಬುದು ನಿಜ. ಆದರೆ ಎಂತಹ ಶಿಕ್ಷಣ ನಮ್ಮದಾಗಬೇಕು, ಅದನ್ನು ಗಳಿಸುವ ಕ್ರಮ ಯಾವುದು ಎಂಬ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡರೆ, ವಿಜ್ಞಾನವು ನೀಡುತ್ತಿರುವ ಕೊಡುಗೆಗಳನ್ನು ನಮ್ಮ ನಿಯಂತ್ರಣದ ಬಂಧದಲ್ಲಿ ಬಳಸುವುದನ್ನು ಅರಿತರೆ ಒಳ್ಳೆಯದು. ನಮ್ಮ ಮಕ್ಕಳು ಆತಂಕ ದೂರವಾದ ಪ್ರೀತಿಯ, ಆಸಕ್ತಿಯ, ನಿರಾಳವಾದ ದಾರಿಯಲ್ಲಿ ನಡೆಯುತ್ತ ಶಿಕ್ಷಣವನ್ನು, ಮಾನವತೆಯನ್ನು ಮೈಗೂಡಿಸಿಕೊಂಡ, ಮೈದುಂಬಿಸಿಕೊಂಡ ಶಿಕ್ಷಣವನ್ನು ಪಡೆದು ಸಮಾಜಮುಖಿಯಾದ ಪ್ರಜೆಯಾಗಲು ಸಾಧ್ಯ.

●

# ಚಿತ್ರದುರ್ಗದಲ್ಲಿ ಕೈಗೊಂಡ ರಾಜ್ಯ ಕಾರ್ಯಕಾರಿಣಿ ಸಭೆ

ಶ್ರೀ ಕೃ. ನರಹರಿಯವರು ಶಾಸಕರಾಗಿದ್ದಾಗ ಶಾಸಕರ ಭವನದ ಎಲ್.ಹೆಚ್ ಕೊಠಡಿ ನಮ್ಮಂತಹ ಶಿಕ್ಷಕರುಗಳಿಗೆ ಬೆಂಗಳೂರಿಗೆ ಬಂದಾಗ ಮನೆಯಾಗಿತ್ತು. ಅಲ್ಲದೇ ಸ್ವತಃ ಅವರೇ ಮೆಜಿಸ್ಟಿಕ್‌ಗೆ ಬಂದು ಶಿಕ್ಷಕರನ್ನು ತಮ್ಮ ಕಾರಿನಲ್ಲಿ ಹತ್ತಿಸಿಕೊಂಡು ಹೋಗಿ ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿಮಾಡಿಸಿ, ಸಮಸ್ಯೆ ಬಗೆಹರಿಸಿ ವಾಪಾಸು ಊರಿಗೆ ಹೋಗಲು ಬಸ್‌ಚಾರ್ಜ್‌ಗೆ ಹಣ ಇದೆಯಾ ಎಂದು ಶಿಕ್ಷಕರಿಗೆ ಕೇಳುತ್ತಿದ್ದರು. ಒಂದು ವೇಳೆ ಇಲ್ಲವೆಂದರೆ ಅವರೇ ಕೊಟ್ಟು ಕಳುಹಿಸುತ್ತಿದ್ದರು. ಇಂತಹ ಅಪರೂಪದ ಶಾಸಕರನ್ನು ನಾವು ಜೀವನದಲ್ಲಿ ಕಂಡೆವು" ಅವರ ಜೀವನ ಶೈಲಿ ಮಾದರಿಯಾಗಿದೆ. ನಮ್ಮೆಲ್ಲರಿಗೆ ಅವರ ಮಾರ್ಗದರ್ಶನ ಮತ್ತು ಪ್ರಭಾವ ಕೂಡ ಲಭಿಸಿದೆ ಎಂದು ಹಿರಿಯ ಕಾರ್ಯಕರ್ತರಾದ ಕರಿಯಪ್ಪನವರು ಚಿತ್ರದುರ್ಗದ ಜ್ಞಾನಭಾರತಿ ವಿದ್ಯಾಸಂಸ್ಥೆಯಲ್ಲಿ ದಿನಾಂಕ 11–11–2018 ರಂದು ನಡೆದ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಕಾರ್ಯಕಾರಿಣಿ ಸಭೆಯಲ್ಲಿ ತಿಳಿಸಿದರು.

ಸರಸ್ವತಿ ವಂದನೆಯೊಂದಿಗೆ ಸಭೆ ಪ್ರಾರಂಭವಾಗಿ ಸಭಾ ವೇದಿಕೆಯನ್ನು ಶ್ರೀ ಎ. ಗಂಗಾಧರಾಚಾರಿ, ಸಹ ಪ್ರಧಾನ ಕಾರ್ಯದರ್ಶಿಗಳು ಸಭೆಗೆ ಪರಿಚಯಿಸಿ ಸ್ವಾಗತಕೋರಿದರು. ಸ್ಥಳೀಯ ಸಂಘದ ಹಿರಿಯ ಮತ್ತು ಪ್ರಮುಖರನ್ನು ಶ್ರೀ ವೃಷಭೇಂದ್ರಸ್ವಾಮಿ, ರಾಜ್ಯ ಕಾರ್ಯದರ್ಶಿಗಳು ಸಭೆಗೆ ಪರಿಚಯಿಸಿ ಸ್ವಾಗತಕೋರಿದರು.

ಸಭೆಯ ಮೊದಲ ಅವಧಿಯಲ್ಲಿ ಆ ದಿನದ ಸಭೆಯ ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲರು ತಿಳಿಸಿದರು. ನಂತರ ಸಭೆಗೆ ವ್ಯಕ್ತಿಗತವಾಗಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಪ್ರಮುಖರು ಪರಿಚಯಿಸಿಕೊಂಡರು ಹಾಗೂ ಎರಡನೇ ಅವಧಿಯಲ್ಲಿ ಸಭೆಯಲ್ಲಿ ಭಾಗವಹಿಸಿದ ವಿವಿಧ ಜಿಲ್ಲೆಯ ಅಧ್ಯಕ್ಷರುಗಳು ಅವರವರ ಜಿಲ್ಲೆಗಳಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ವರದಿಗಳನ್ನು ಸಭೆಯಲ್ಲಿ ಮಂಡಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್‌ರವರು ವರ್ಷದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಮತ್ತು ಶೈಕ್ಷಣಿಕ ಸಮ್ಮೇಳನ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿಸಿದರು.

ಮೂರನೇ ಅವಧಿಯಲ್ಲಿ ಪ್ರಸ್ತುತ ಇರುವ ಶಿಕ್ಷಕರ ಸಮ್ಮೇಳನಗಳ ಬಗ್ಗೆ ಪ್ರಶ್ನೋತ್ತರ ವೇಳೆಯನ್ನು ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಶಹಾಪುರ್, ವಿಧಾನಪರಿಷತ್ ಸದಸ್ಯರು ನಡೆಸಿಕೊಟ್ಟರು ಹಾಗೂ ರಾಜ್ಯ ಶೈಕ್ಷಣಿಕ ಸಮ್ಮೇಳನವನ್ನು ದಿನಾಂಕ 18.12.2018 ರಂದು ಹುಬ್ಬಳ್ಳಿಯಲ್ಲಿ ಹಮ್ಮಿಕೊಳ್ಳಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಕೊನೆಯ ಅವಧಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹಿರಿಯ ಕಾರ್ಯಕರ್ತರಾದ ಶ್ರೀ ಟಿ. ರಾಜಶೇಖರ ಮಾಜಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾಧ್ಯಕ್ಷರುಗಳಾದ ಶ್ರೀ ರಂಗಪ್ಪ, ಶ್ರೀ ಕರಿಯಪ್ಪ ಶ್ರೀ, ಮಹೇಶ್ವರಪ್ಪರವರುಗಳಿಂದ ಶ್ರೀ ಕೃ. ನರಹರಿಯರಿಗೆ, ಶ್ರೀ.ಕೃಷ್ಣಮೂರ್ತಿಯವರಿಗೆ ಹಾಗೂ ಶ್ರೀ.ನಾಗಭೂಷಣ್ ರಾವ್ ಮತ್ತು ಶ್ರೀಮತಿ ಸೀತಾಲಕ್ಷ್ಮಿಯವರಿಗೆ ಸನ್ಮಾನಿಸಲಾಯಿತು. ಶ್ರೀ ರಂಗಪ್ಪ ಮತ್ತು ಕರಿಯಪ್ಪನವರು ಮಾತನಾಡಿ ಶ್ರೀ ಕೃ. ನರಹರಿಯವರು ಸಂಘ ಕಟ್ಟಿ ಬೆಳೆಸಿದ ಬಗ್ಗೆ, ಶಿಕ್ಷಕರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ ಬಗ್ಗೆ ಮತ್ತು ಅವರ ತ್ಯಾಗ ಮನೋಭಾವದ ಕುರಿತು ಅವರಿಗಾದ ಕೆಲವು ಅನುಭವಗಳನ್ನು ಸಭೆಯಲ್ಲಿ ಹಂಚಿಕೊಂಡರು. ಅದೇ ರೀತಿ ಇನ್ನೋರ್ವ ಹಿರಿಯರಾದ ಶ್ರೀ ಕೃಷ್ಣಮೂರ್ತಿಯವರು ತಮ್ಮ ಜೀವನವನ್ನು ಶಿಕ್ಷಕ ಸಂಘಕ್ಕೆ ಮುಡುಪಾಗಿಟ್ಟಿದ್ದು ಮತ್ತು ಶ್ರೀ ನಾಗಭೂಷಣ ರಾವ್, ಶ್ರೀಮತಿ ಸೀತಾಲಕ್ಷ್ಮಿ ರವರು ಶಿಕ್ಷಕ ಸಂಘ ಕಟ್ಟಿ ಬೆಳೆಸುವಲ್ಲಿ ಶ್ರಮಿಸಿದ ರೀತಿಯನ್ನು ಸಭೆಗೆ ತಿಳಿಸಿದರು.

ಅಂತಿಮವಾಗಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರರವರು ಎ.ಬಿ.ಆರ್.ಎಸ್.ಎಂ ಇಂದೋರ್‌ನಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಕಾರ್ಯಕಾರಿಣಿ ಹಾಗೂ ಶಿಕ್ಷಾಭೂಷಣ ಕಾರ್ಯಕ್ರಮಗಳ ಬಗ್ಗೆ ಮಾತನಾಡಿ ಸಂಘಟನೆಯನ್ನು ಮುಂಬರುವ ದಿನಗಳಲ್ಲಿ ಬೆಳೆಸುವ ದೃಷ್ಟಿಯಿಂದ ಮಾರ್ಗದರ್ಶನ ಮಾಡಿದರು.

ಕೊನೆಗೆ ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ಶ್ರೀ ಸುರೇಂದ್ರರವರು ವಂದನಾರ್ಪಣೆ ಸಲ್ಲಿಸಿದರು. ಸಭೆಯು ಯಶಸ್ವಿಯಾಗಲು ಚಿತ್ರದುರ್ಗ ಜಿಲ್ಲಾಧ್ಯಕ್ಷರಾದ ಶ್ರೀ ಆರ್. ಮಲ್ಲಿಕಾರ್ಜುನಯ್ಯ ಮತ್ತು ರಾಜ್ಯ ಕಾರ್ಯದರ್ಶಿಯಾದ ವೃಷಬೇಂದ್ರಸ್ವಾಮಿಯವರು ಸ್ಥಳೀಯ ಕಾರ್ಯಕರ್ತರ ಸಹಕಾರದಿಂದ ಎಲ್ಲಾ ವ್ಯವಸ್ಥೆ ಕಲ್ಪಿಸಿದರು.

–ವರದಿ: ಗಂಗಾಧರಾಚಾರಿ, ಸಹಪ್ರಧಾನ ಕಾರ್ಯದರ್ಶಿ

# ಸಾಕ್ಷರತಾ ಪರೀಕ್ಷೆಯಲ್ಲಿ ಶೇ.98 ರಷ್ಟು ಅಂಕ ಪಡೆದ 96 ವರ್ಷದ ಮಹಿಳೆ

ಕಲಿಯುವಿಕೆ ಒಂದು ನಿರಂತರ ಪ್ರಕ್ರಿಯೆ. ಅದಕ್ಕೆ ವಯಸ್ಸಿನ ಹಂಗಿಲ್ಲ. ಕೇರಳದ 96 ವರ್ಷದ ಮಹಿಳೆ ಕಾರ್ತಿಯಾಯಿನಿಯವರು, ಸಾಕ್ಷರತಾ ಪರೀಕ್ಷೆಯಲ್ಲಿ ಶೇ.98ರಷ್ಟು ಅಂಕಗಳನ್ನು ಗಳಿಸಿ ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸಿದ್ದಾರೆ. ಕೇರಳ ರಾಜ್ಯ ಸಾಕ್ಷರತಾ ಅಭಿಯಾನ ಮಂಡಳಿಯು ಅಕ್ಷರಲಕ್ಷಂ ಸಾಕ್ಷರತಾ ಪರೀಕ್ಷೆಯನ್ನು ಹಮ್ಮಿಕೊಂಡಿದ್ದು, ಕಾರ್ತಿಯಾಯಿನಿ ಇದರಲ್ಲಿ ಭಾಗಿಯಾಗಿದ್ದರು. ಈ ಪರೀಕ್ಷೆಯಲ್ಲಿ ಶೇ.98ರಷ್ಟು ಅಂಕಗಳನ್ನು ಪಡೆಯುವ ಮೂಲಕ ಅವರು ಕಲಿಕೆಗೆ ವಯಸ್ಸಿನ ಹಂಗಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಓದುವಿಕೆ, ಬರವಣಿಗೆ, ಗಣಿತ ಇತ್ಯಾದಿಗಳಲ್ಲಿ ಪರೀಕ್ಷೆಯನ್ನು ನಡೆಸಲಾಗಿತ್ತು. ಬರವಣಿಗೆಯಲ್ಲಿ 40 ರಲ್ಲಿ 38 ಅಂಕ, ಓದುವಿಕೆ ಮತ್ತು ಗಣಿತದಲ್ಲಿ ಪೂರ್ಣ ಅಂಕಗಳನ್ನು ಪಡೆದುಕೊಂಡಿದ್ದಾರೆ. ಆಗಸ್ಟ್‌ನಲ್ಲಿ ಪರೀಕ್ಷೆ ನಡೆದಿದ್ದು, ಬುಧವಾರ ಫಲಿತಾಂಶ ಹೊರಬಿದ್ದಿದೆ. ಫಲಿತಾಂಶದ ಬಳಿಕ ಕಾರ್ತಿಯಾಯಿನಿ ಮನೆಯಲ್ಲಿ ಸಂಭ್ರಮ ಮನೆ ಮಾಡಿದೆ. ಬಾಲ್ಯದಲ್ಲಿ ಶಿಕ್ಷಣ ಪಡೆಯಲಾಗದ ಇವರು, ಬಳಿಕ ತಮ್ಮ ಮಗಳ ಪ್ರೇರಣೆಯಿಂದ ಶಿಕ್ಷಣ ಪಡೆಯಲು ಮುಂದಾದರು. ವಿದ್ಯಾಭ್ಯಾಸ ಬಗ್ಗೆ ಅದಮ್ಯ ಆಸಕ್ತಿ ಹೊಂದಿದ ಇವರಿಗೆ ಇನ್ನೂ ಶಿಕ್ಷಣವನ್ನು ಮುಂದುವರೆಸಬೇಕೆಂಬ ಬಯಕೆಯಿದೆ.

ಕೃಪೆ : news13.in

# ಭಾರತದ ಏಕೀಕರಣ ಚಳುವಳಿಯ ನೇತಾರ

ಅಕ್ಟೋಬರ್ 31, 2018 ರಂದು ಪ್ರಧಾನಿ ನರೇಂದ್ರ ಮೋದಿಯವರು ವಿಶ್ವದಲ್ಲೇ ಅತಿ ಎತ್ತರದ ಪ್ರತಿಮೆಯನ್ನು ಅನಾವರಣಗೊಳಿಸಿದರು. ಈ ಪ್ರತಿಮೆಯ ಎತ್ತರ 182 ಮೀ. ಆ ಪ್ರತಿಮೆ ಸರದಾರ ವಲ್ಲಭಭಾಯಿಯವರದ್ದು. ಸರದಾರರ ವ್ಯಕ್ತಿತ್ವ ಎತ್ತರ ಎತ್ತರ ಮುಗಿಲೆತ್ತರ.

ಸ್ವತಂತ್ರ ಭಾರತ ಜನ್ಮ ತಾಳಿತು, 1947 ರ ಆಗಸ್ಟ್ 15 ರಂದು. ನೋವು ನಲಿವಿನೊಂದಿಗೆ. ನೋವು ಎಂದೆ ಅಲ್ಲವೆ. ಏಕೆ? ಅಂದು ಭಾರತದ ವಿಭಜನೆ ಅಧಿಕೃತವಾಯಿತು. ವಿಭಜನೆ ತಂದ ಸಹಸ್ರ ಸಹಸ್ರ ಸಮಸ್ಯೆಗಳು ನೋವಿಗೆ ಕಾರಣ.

ವಿಭಜನೆಯಿಂದ ಪಾಕಿಸ್ತಾನದಿಂದ ಬರುತ್ತಿದ್ದ ಅಸಂಖ್ಯಾತ ನಿರಾಶ್ರಿತರು ತರುತ್ತಿದ್ದ ಭಯಾನಕ ಸುದ್ದಿ, ಇದರೊಂದಿಗೆ ಪಾಕಿಸ್ತಾನದಿಂದ ಭಾರತಕ್ಕೆ ಬರುತ್ತಿದ್ದ, ರಕ್ತ ಸೋರುತ್ತಿದ್ದ ಅಪಾರ ನಿರ್ಜೀವಿಗಳು ದೆಹಲಿ ಹಾಗೂ ಪಂಜಾಬಿನಲ್ಲಿ ಸೃಷ್ಟಿಸಿದ ಕಾನೂನು ವ್ಯವಸ್ಥೆ ಆಡಳಿತಕ್ಕೆ ಸವಾಲಾಯಿತು. ಈ ಸವಾಲನ್ನು ಯಶಸ್ವಿಯಾಗಿ ನಿರ್ವಹಿಸಿದ ಯಶಸ್ಸು ಪಟೇಲರದು.

ಮತ್ತೊಂದು ಸವಾಲು ಬ್ರಿಟಿಷರು ಭಾರತದ ಸ್ವಾತಂತ್ರ ಘೋಷಿಸಿದಾಗ ಇಂದಿನ ಭಾರತದಂತೆ ಒಕ್ಕೂಟವಾಗಿರಲಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿದ್ದುದು 3/5 ಭಾಗ. ಉಳಿದದ್ದು 550 ರಾಜ, ಮಹಾರಾಜರ ಆಳ್ವಿಕೆಯಲ್ಲಿತ್ತು. ಸ್ವಾತಂತ್ರ ಘೋಷಣೆಯಲ್ಲಿ ಈ 550 ರಾಜ್ಯಗಳು ಸ್ವತಂತ್ರವಾಗಿ ಉಳಿಯಬಹುದು ಅಥವಾ ಭಾರತ, ಪಾಕಿಸ್ತಾನದೊಡನೆ ವಿಲೀನವಾಗುವ ಅವಕಾಶ ಕಲ್ಪಿಸಲಾಗಿತ್ತು.

ಈ ಅವಕಾಶವನ್ನು ಉಪಯೋಗಿಸಿ ಕೆಲವು ಗಡಿ ರಾಜ್ಯಗಳು ಪಾಕ್‌ನಲ್ಲಿ ವಿಲೀನಗೊಳ್ಳುವ ಪ್ರಯತ್ನದಲ್ಲಿದ್ದುದು ಸರಿಯೇ. ಈ ಸಮಸ್ಯೆಯ ಆಳವನ್ನರಿತ ಮಹಾತ್ಮಾ ಗಾಂಧಿಯವರು ಈ ರಾಜ್ಯಗಳು ಭಾರತದಲ್ಲಿ ಉಳಿಯುವಂತೆ ಮಾಡುವ ಮಹತ್ಕಾರ್ಯವನ್ನು ಪಟೇಲರಿಗೆ ವಹಿಸಿದರು. 1946 ಜುಲೈನಿಂದಲೇ ಕಾರ್ಯ ಪ್ರವೃತ್ತರಾದರು ಹಾಗೂ ಬಹುತೇಕ ಯಶಸ್ಸನ್ನೂ ಕಂಡರು. ಕೆಲವು ಗಡಿ ರಾಜ್ಯಗಳು ಪಟೇಲರಿಗೆ ಸವಾಲೆಸದುವು.

ಬಹುಸಂಖ್ಯಾತ ಪ್ರಜೆಗಳು ಹಿಂದೂಗಳಾಗಿದ್ದು ಜನಾಭಿಪ್ರಾಯದ ವಿರುದ್ಧ ಜುನಘಡ ನವಾಬ ಪಾಕಿಸ್ತಾನದ ಜೊತೆ ವಿಲೀನಕ್ಕೆ ಸಹಿಹಾಕಿ ಜನ ದಂಗೆ ಎದ್ದಾಗ ತನ್ನ ಹೆಂಡತಿ ಮಕ್ಕಳನ್ನು ಮರೆತು ತಾನು ಪ್ರೀತಿಸುತ್ತಿದ್ದ ನಾಯಿಗಳೊಡನೆ ಪಾಕ್‌ಗೆ ದೌಡಾಯಿಸಿದನು. ಅಲ್ಲಿ ಕಾನೂನು ವ್ಯವಸ್ಥೆ ಸರಿಪಡಿಸಿ, ಜನಾಭಿಪ್ರಾಯ ಪಡೆದು ಭಾರತದೊಂದಿಗೆ ವಿಲೀನ ಗೊಳಿಸಿದ ಕೀರ್ತಿ ಸರದಾರ ಪಟೇಲರದ್ದು

ಜೋಧಪುರ ರಾಜರು ಜೈಸಲ್ಮಾನ ರಾಜರ ಸಹಿತ ಪಾಕ್‌ನಲ್ಲಿ ವಿಲೀನಗೊಳ್ಳಲು ಯತ್ನಿಸಿ ಪಟೇಲರ ರಾಜತಾಂತ್ರಿಕ ಚತುರತೆಗೆ ಮಣಿದು ಭಾರತಲ್ಲಿಯೇ ಉಳಿದರು.



ಹೆಚ್ಚೇಕೆ ದಕ್ಷಿಣ ಭಾರತದ 80% ಹಿಂದೂಗಳಿದ್ದ ಹೈದರಾಬಾದ್ ನಿಜಾಮ ಪಾಕ್ ಜೊತೆ ವಿಲೀನಗೊಳ್ಳಲು ಯತ್ನಿಸಿದ್ದು ವಿಶ್ವಸತ್ಯ. ರಜಾಕಾರರನ್ನು ಹಿಂದೂಗಳ ಮೇಲೆ ಆಕ್ರಮಕ್ಕೆ ಎತ್ತಿ ಕಟ್ಟಿದ್ದು ಸತ್ಯ. ಇಂತಹ ಸಂಧಿಗ್ದ ಸಮಯದಲ್ಲಿ ಪಟೇಲರು ತಮ್ಮ ಆಪ್ತ ಕಾರ್ಯದರ್ಶಿ ಎನ್.ಪಿ. ಮೆನನ್‌ರೊಂದಿಗೆ ಚರ್ಚಿಸಿ "ಆಪರೇಷನ್ ಪೋಲೋ' ಕಾರ್ಯಕ್ರಮ ಆಯೋಜಿಸಿ ಭಾರತೀಯ ಸೈನ್ಯಕ್ಕೆ ಹೈದರಾಬಾದನ್ನು ವಶಪಡಿಸಿಕೊಳ್ಳಲು ಆದೇಶಿಸಿದರು. 7 ದಿನಗಳ ಸತತ ಕಾರ್ಯಾಚರಣೆ ಭಾರತಕ್ಕೆ ಯಶಸ್ಸನ್ನು ತಂದಿತು.

ಈ ಎಲ್ಲಾ ಕಾರ್ಯಗಳಲ್ಲಿ ಪಟೇಲರು ಅನೇಕ ವರಿಷ್ಠರ ವಿರುದ್ಧ ನಿಲ್ಲಬೇಕಾಯಿತು. ಈ ಎಲ್ಲಾ ವಿರೋಧದ ನಡುವೆಯೂ ಪಟೇಲರು ಧೈರ್ಯ, ದಿಟ್ಟ ನಿಲುವಿನೊಂದಿಗೆ ಇಂದಿನ ಭಾರತವನ್ನು ಕಟ್ಟಿಕೊಟ್ಟಿದ್ದಾರೆ.

ಇದರ ಏಕತೆ, ಅಖಂಡತೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿಯನ್ನು ನಮಗೆ ಬಿಟ್ಟಿದ್ದಾರೆ.

ಬನ್ನಿರಿ, ಭಾರತವನ್ನು ಬೃಹತ್ ರಾಷ್ಟ್ರ ಮಾಡೋಣ. ಉಕ್ಕಿನ ಮನುಷ್ಯ ಸರದಾರ ಪಟೇಲರ ಕನಸನ್ನು ನಿಜ ಮಾಡೋಣ.

■ ಗರ್ಗೇಶ್ವರಿ

# ಚಿತ್ರಸುದ್ದಿ



ಚಿತ್ರಕಲಾ ಶಿಕ್ಷಕರ ರಾಜ್ಯಮಟ್ಟದ ಸಭೆಯನ್ನು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರಾದ ಶ್ರೀಮತಿ ಶಾಲಿನಿ ರಜನೀಶ್ ಅವರು ಉದ್ಘಾಟಿಸುತ್ತಿರುವುದು



ಶ್ರೀಮತಿ ಶಾಲಿನಿ ರಜನೀಶ್ ಅವರು ಚಿತ್ರಕಲಾ ಪ್ರದರ್ಶನವನ್ನು ವೀಕ್ಷಿಸುತ್ತಿರುವುದು.



ಚಿತ್ರದುರ್ಗದಲ್ಲಿ ನಡೆದ ಕಾರ್ಯಕಾರಿಣಿ ಸಭೆಯ ಉದ್ಘಾಟನೆ



ಚಿತ್ರದುರ್ಗದ ಕಾರ್ಯಕಾರಿಣಿಯಲ್ಲಿ ಸಂಘದ ಹಿರಿಯರಿಗೆ ಸನ್ಮಾನ

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20



srushtidesigns@gmail.com